ಸಂಪುಟ : 8 ಸಂಚಿಕೆ : 284 ಪುಟ : 4 ಬೆಲೆ : 3.00 ಶುಕ್ರವಾರ ಡಿಸೆಂಬರ್ 22, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 284 Pages : 4 Price : 3.00 Friday December 22, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಡಿ. 22 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ: ವಾರ್ಡ್ ನಂ 29 ಚಂದಾವರಿ ಲೈನ್, ಡಂಬಳವರ ಲೈನ್, ಬನ್ನಿ ಕಟ್ಟಿ ಲೈನ್. ವಾರ್ಡ್ ನಂ. 15,16,17 ಜವಳಗಲ್ಲಿ, ಶಹಾಪೂರ ಪೇಟೆ, ಮೀನಿನ ಮಾರ್ಕೆಟ್, ಡಿಸಿ ಮೇಲ್ ರೋಡ್, ಕರ್ನಾಟಕ ಟಾಕೀಸ್, ಮಹೇಂದ್ರಕರ್ ಸರ್ಕಲ್, ಗಾಂಧಿ ಸರ್ಕಲ್ ರೋಡ್, ಅಂಗನವಾಡಿ ಲೈನ್, ಶುದ್ಧ ನೀರಿನ ಘಟಕದ ಸುತ್ತಮುತ್ತಲಿನ ಕೆಲವು ಭಾಗಗಳು, ಬಸವೇಶ್ವರ ಗುಡಿ ಲೈನ್, ಗಣೇಶ್ ಗುಡಿ ಲೈನ್.

ವಾರ್ಡ್ ನಂ. 30, 32 ದಾಸರ ಓಣಿ, ಭಜಂತ್ರಿ ಓಣಿ, ಸಿಕ್ಕಲಿಗಾರ ಓಣಿ, ರಂಗನವಾಡ, ಸುಣಗಾರ ಓಣಿ, ತ್ರಿಕೋಟೇಶ್ವರ ಮಂದಿರ ರೋಡ್, ಜಂಡಾ ಕಟ್ಟಿ, ಗುಜ್ಜರ ಬಸ್ತಿ ಲೈನ್, ಹಳೇ ಕಚೇರಿ ರೋಡ್, ಜೋಡ ಮಾರುತಿ ದೇವಸ್ಥಾನದ ಲೈನ್, ಮುಳುಗುಂದ ನಾಕಾ, ರಾಚೋಟೇಶ್ವರ ಗುಡಿಯ ಮುಂದಿನ ಲೈನ್, ಕೋಳಿಕೇರಿ ಜಿನ್, ವಿಠ್ಠಲ ಮಂದಿರ ಸುತ್ತಮುತ್ತ, ಎಸಿ ಆಫೀಸ್ ಹಿಂದಿನ ಭಾಗ, ಒಂದು ನಂಬರ್ ಶಾಲೆಯ ಹಿಂದಿನ ಭಾಗ, ಎಚ್ ಡಿ ಎಫ್ ಸಿ ಬ್ಯಾಂಕ್ ಲೈನ್, ದತ್ತಾತ್ರೇಯ ಗುಡಿ ಲೈನ್, ಬನ್ನಿ ಮಹಾಕಾಳಿ ಗುಡಿ ಲೈನ್.

ವಾರ್ಡ್ ನಂ. 28 ಪಂಚಾಕ್ಷರಿ ನಗರ ಆರನೇ ಕ್ರಾಸ್ ಕೆಲವು ಭಾಗಗಳು. ವಾರ್ಡ್ ನಂ. 21, 22, 23,19, 20, 25 ಬೇವಿನ ಮರದಮ್ಮ ಹೆರಕಲ ಮಟ್ಟಿಯಾರ ಲೈನ್, ಹಾಳ ದಿಬ್ಬ, ಪಲ್ಲೇದರ ಲೈನ್, ಸಿಟಿ ಹಾಲ್ ಭಾಗ–1, 2 ಕಲ ಬಂಡಿಯವರ ಲೈನ್, ಎರಡನೇ ನಂಬರ್ ಶಾಲೆ, ಕೊಟ್ಟೂರವರ ಲೈನ್, ಎಸ್ ಟಿ ಡಿ ಖಾನ್ ತೋಟ, ಶರೀಫ್ಜ್ಜನ ಗದ್ದುಗೆ.

ವಾರ್ಡ್ ನಂ. 2 ಸೆಟ್ಲಮೆಂಟ್, ಶಿಕಾರಿ ಓಣಿ, ಹನುಮಂತ ದೇವರ ಗುಡಿ ಲೈನ್, ಗಾಂಧಿನಗರ ಸ್ಲಾಬ್ ಮನೆ, ವೆಲ್ಫೇರ್.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕ್ರಿಸ್‌ಮಸ್: ಹೆಚ್ಚುವರಿ ವಿಶೇಷ ಸಾರಿಗೆಗಳ ಕಾರ್ಯಾಚರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

2023ನೇ ಸಾಲಿನ ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಸಾರ್ವಜನಿಕರು ತಮ್ಮ ಸ್ವಂತ ಊರುಗಳಿಗೆ ತೆರಳುವುದರಿಂದ, ವಾ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ 130 ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ಡಿ. 23 ನಾಲ್ಕನೇ ಶನಿವಾರ, 24 ಭಾನುವಾರ ಮತ್ತು 25 ಸೋಮವಾರ ಕ್ರಿಸ್‌ಮಸ್ ಹಬ್ಬ ಇರುವದರಿಂದ ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಪ್ರಯಾಣಿಕರು ತಮ್ಮ ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು.

ಬೆಂಗಳೂರಿನಿಂದ ರಾಜ್ಯ/ಅಂತರರಾಜ್ಯದ ವಿವಿಧ ಸ್ಥಳಗಳಿಗೆ ತೆರಳಲು ಡಿ. 22 ರಿಂದ 24 ರವರೆಗೆ ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಹಬ್ಬ ಮುಗಿದ ಮೇಲೆ ದಿ. 25.12.2023 ರಂದು ಮತ್ತು ನಂತರದ ದಿನಗಳಂದು ಪ್ರಮುಖ ಸ್ಥಳಗಳಿಂದ ಜನದಟ್ಟಣೆಗೆ ಅನುಗುಣವಾಗಿ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುವುದು.

ಸಾರ್ವಜನಿಕರು ಸುಖಕರ ಹಾಗೂ ಸುರಕ್ಷಿತ ಪ್ರಯಾಣಿಕ್ಕಾಗಿ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸುವಂತೆ ಮತ್ತು ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮುಖ್ಯ ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹವಾಮಾನ ವೈಪರಿತ್ಯ । ಹಣ್ಣುಗಳ ರಾಜನಿಗೆ ಜಿಗಿಹುಳು ಬಾಧೆ । ಆತಂಕದಲ್ಲಿ ಮಾವು ಬೆಳೆಗಾರರು

# ನಿರಾಸೆ ಮೂಡಿಸುತ್ತಿರುವ ಹಣ್ಣುಗಳ ರಾಜ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಬರಗಾಲದ ಸಂಕಷ್ಟದ ಸುಳಿಗೆ ಸಿಲುಕಿರುವ ರೈತರು ಒಂದಿಲ್ಲೊಂದು ರೀತಿಯಲ್ಲಿ ಕೈಸುಟ್ಟುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತಲೇ ಇದೆ. ಈಗಿರುವ ಬೆಳೆಯಲ್ಲಿದಿದ್ದರೆ, ಮುಂದಿನ ಬೆಳೆಯಾದರೂ ಒಂದಿಷ್ಟು ಲಾಭ ತಂದುಕೊಟ್ಟು ಆಧಾರವಾಗಬಹುದು ಎಂಬ ನಿರೀಕ್ಷೆಯೂ ಹುಸಿಯಾಗುತ್ತಿದೆ. ಈ ವರ್ಷ ಮಾವಿನ ಬೆಳೆಯಿಂದ ಉತ್ತಮ ಆದಾಯ ನಿರೀಕ್ಷಿಸಿದ್ದ ರೈತರ ಮೊಗದ ಕಿರುನಗೆಯೂ ಮರೆಯಾಗುವಂತೆ, ಫಸಲು ಬಿಡುವ ಮುನ್ನವೇ ಮಾವಿನ ಹೂವು–ಚಿಗುರಿಗೆ ಜಿಗಿಹುಳು, ಕರಿಹೇನು, ಬೂದು ರೋಗ, ರಸ ಹೀರುವ ಕೀಟ ಬಾಧೆ ಆವರಿಸಿ ಇನ್ನಷ್ಟು ಚಿಂತೆಗೀಡು ಮಾಡಿದೆ.

ಅತಿವೃಷ್ಟಿ, ಬರಗಾಲದಿಂದ ಖುಷ್ಕಿ ಜಮೀನನಲ್ಲಿ ಯಾವ ಬೆಳೆಯೂ ಸಮಾಧಾನಕರವಾಗಿ ಕೈಸೇರದೇ ನಷ್ಟ ಅನುಭವಿಸುತ್ತ ಬಂದಿರುವ ರೈತರು ತೋಟಗಾರಿಕೆ ಬೆಳೆಯತ್ತ ಚಿತ್ತ ಹರಿಸುತ್ತಿದ್ದಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಹವಾಮಾನ ವೈಪರಿತ್ಯ, ಅಕಾಲಿಕ ಮಳೆ ಇತ್ಯಾದಿ ಕಾರಣಗಳಿಂದ ಮಾವು ಫಸಲಿನ ಮೇಲೆ ವ್ಯತಿರಿಕ್ತ ಪರಿಣಾಮಗಳಿಂದ ಮಾವು ಬೆಳೆಗಾರರು ಆತಂಕಕ್ಕೀಡಾಗಿದ್ದಾರೆ. ನವಂಬರ್ ತಿಂಗಳಲ್ಲಿ ಗಿಡಗಳು ಹೂವು ಬಿಟ್ಟು ಕಂಗೊಳಿಸತೊಡಗಿದಾಗ, ಈ ಬಾರಿ ಉತ್ತಮ ಫಸಲು ಬರುತ್ತದೆ ಎಂಬ ನಿರೀಕ್ಷೆಯಲ್ಲಿದ್ದರು. ಆದರೆ ಈಗ ಅಕಾಲಿಕ ಮಳೆ, ಹವಾಮಾನ ವೈಪರಿತ್ಯದ ಕಾರಣದಿಂದ ಮಾವು ಕಾಯಿಕಚ್ಚುವ ಹಂತದಲ್ಲಿಯೇ ರೋಗಬಾಧೆಗೆ ತುತ್ತಾಗಿರುವುದು ಬೆಳೆಗಾರರರನ್ನು ಹತಾಶಗೊಳಿಸಿದೆ.

ತೋಟಗಾರಿಕಾ ಇಲಾಖೆಯ ಮಾಹಿತಿಯಂತೆ, ಲಕ್ಷ್ಮೇಶ್ವರ/ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರ, ಬಾಲೆಹೊಸೂರು, ದೊಡ್ಡೂರು, ಉಂಡೇನಹಳ್ಳಿ, ಶ್ಯಾಬಳಾ, ರಾಮಗೇರಿ, ಸೂರಣಗಿ, ಶಿಗ್ಲಿ ಮತ್ತಿತರರ ಕಡೆ 550 ಎಕರೆ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ.

▶▶ 3ನೇ ಪುಟಕ್ಕೆ



ಮಳೆ ಕೊರತೆಯ ನಡುವೆಯೂ ಕಷ್ಟಪಟ್ಟು ಬೆಳೆ ಕಾಪಾಡಿದ್ದೇವೆ. ಖುಷ್ಕಿ ಜಮೀನಿನಲ್ಲಿ ಈ ವರ್ಷ ಅತಿವೃಷ್ಟಿಯಿಂದ ಸಾಕಷ್ಟು ಹಾನಿಯಾಗಿದೆ. 6 ಎಕರೆ ಜಮೀನಿನಲ್ಲಿ ಮಾವಿನಿಂದ ಈ ವರ್ಷ ಉತ್ತಮ ಬೆಳೆ ಬರಬಹುದೆಂದು ನಂಬಿದ್ದೆವು. ಆದರೆ ಈಗ ನಿರೀಕ್ಷೆ ಸುಳ್ಳಾಗುತ್ತಿದೆ. ತೋಟಗಾರಿಕಾ ಇಲಾಖೆ ರೈತರಿಗೆ ಪ್ರಾರಂಭದಲ್ಲಿಯೇ ಕಾರ್ಯಾಗಾರ ನಡೆಸುವ ಮೂಲಕ ತಿಳುವಳಿಕೆ ನೀಡಬೇಕು. ಬರಗಾಲದ ಸಂಕಷ್ಟದಲ್ಲಿರುವ ರೈತರಿಗೆ ಉಚಿತ ಔಷಧೋಪಚಾರ, ಬೆಳೆಹಾನಿ ಪರಿಹಾರ ಕಲ್ಪಿಸಬೇಕು.

**– ಸುರೇಶ ಕುರ್ಡೇಕರ, ನಿಂಗಪ್ಪ ಪೂಜಾರ. ಮಾವು ಬೆಳೆಗಾರರು.**



ಜಿಗಿ ಹುಳು ವಿಸರ್ಜಿಸುವ ಸಿಹಿ ದ್ರವವು ಕೀಟಗಳನ್ನು ಆಕರ್ಷಿಸುತ್ತದೆ ಮತ್ತು ಇದು ಬೂದಿಯಂತಹ ಬೂಸ್ಟ್‌ನ ಬೆಳವಣಿಗೆಗೆ ಕಾರಣವಾಗಿ ಬೆಳೆ ನಷ್ಟವನ್ನುಂಟುಮಾಡುತ್ತದೆ. ರೈತರು ಆರಂಭದಲ್ಲಿ ಇದನ್ನು ಹತೋಟಿಗೆ ತಂದುಕೊಂಡರೆ ಫಸಲು ಉಳಿಸಿಕೊಳ್ಳಲು ಸಾಧ್ಯ. ನಿಯಂತ್ರಣಕ್ಕಾಗಿ 10 ಲೀ. ನೀರಿಗೆ 3 ಎಂಎಲ್ ಇಮಿಡಾಕ್ಲೋಪ್ರಿಡ್, 10 ಗ್ರಾಂ ಕಾರ್ಬನ್ ಡೈಜಿಮ್, 30 ಎಂಎಲ್ ಬೇವಿನ ಎಣ್ಣೆ, ಅಂಟು ದ್ರಾವಣವನ್ನು ಬೆರೆಸಿ ವಾರಕ್ಕೊಮ್ಮೆ 2 ಬಾರಿ ಸಿಂಪಡಿಸಬೇಕು. ವಾರದ ನಂತರ 75 ಗ್ರಾಂ ಮ್ಯಾಂಗ್ಯೋ ಸ್ಪೆಷಲ್ ದ್ರಾವಣವನ್ನು 15 ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು. ವಾರದ ನಂತರ 25 ಎಂ.ಎಲ್ ಡೈಕೋಪಾಲ್, 10 ಗ್ರಾಂ ಕಾರ್ಬನ್ ಡೈಜಿಂ, 20 ಎಂ.ಎಲ್ ಬೇವಿನ ಎಣ್ಣೆ 15 ಲೀ. ನೀರಿಗೆ ಸೇರಿಸಿ ಸಿಂಪಡಿಸಬೇಕು. ಅಗತ್ಯವಿದ್ದರೆ ಮಾವು ಸ್ಪೆಷಲ್ ದ್ರಾವಣ ಮರು ಸಿಂಪರಣೆ ಮಾಡಬಹುದು. ಅಲ್ಲದೇ ಮೋಹಕ ಬಲೆಗಳನ್ನು ಅಳವಡಿಸಬೇಕು. ಮಾಹಿತಿಗೆ–9480957203 ಸಂಪರ್ಕಿಸಬಹುದು.

**–ಸುರೇಶ ಕುಂಬಾರ.**
ಸಹಾಯಕ ನಿರ್ದೇಶಕರು,
ತೋಟಗಾರಿಕೆ ಇಲಾಖೆ.

### ಸೇವಾ ಖಾಯಮಾತಿಗೆ ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಅತಿಥಿ ಉಪನ್ಯಾಸಕರು

# ವಿದ್ಯಾರ್ಥಿಗಳ ಹಿತವನ್ನೂ ಪರಿಗಣಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸುಮಾರು 11 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರ ಸೇವಾ ಖಾಯಮಾತಿಯನ್ನು ಮಾಡುವವರೆಗೂ ನಮ್ಮ ಹೋರಾಟ ನಿಲ್ಲದು. ಎಲ್ಲಾ ಸರ್ಕಾರಗಳು ಸಮಯಾವಕಾಶವನ್ನು ಕೇಳುತ್ತ ಕಾಲಹರಣ ಮಾಡಿ, ಅತಿಥಿ ಉಪನ್ಯಾಸಕರ ಬದುಕು ಬೀದಿಗೆ ಬಂದಿದೆ ಎಂದು ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಡಾ. ಹನಮಂತಗೌಡ ಕಲ್ಮನಿ ವಿಷಾದ ವ್ಯಕ್ತಪಡಿಸಿದರು.

ಅವರು ನಗರದ ಗಾಂಧಿ ವೃತ್ತದಿಂದ ಪುಟ್ಟರಾಜ ಕವಿ ಗವಾಯಿಗಳರವರ ಮಾರ್ಗವಾಗಿ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ಪಾದಯಾತ್ರೆಯ ಮೂಲಕ ತೆರಳಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಪೀಟರ್ ವಿನೋದಚಂದ, ಆರ್.ಎಸ್. ತಿಗಡಿ, ಎಂ.ಎಸ್. ಕುಸುಗಲ್ಲ, ಎಸ್.ಎಸ್. ಸರ್ವಿ, ಡಾ. ಎ.ಎ. ಸೊಪ್ಪಿಮಠ, ಶರಣು ಮರೆಗುದ್ದಿ, ಎಂ.ಎಚ್. ಕರಲವಾಡ್, ಡಾ. ವಿರುಪಾಕ್ಷಿ ಮುಳಗುಂದ, ಭಗತಸಿಂಗ್ ನವಲೂರಕರ, ನಾಗರಾಜ ಹೊನ್ನೂರ, ಡಾ. ಸುಜಾತಾ ಬರದೂರ, ಪದ್ಮಾ ತಳಕಲ್ಲ, ರಶ್ಮಿ ಹೂಗಾರ, ಶಿಲ್ಪಾ ಹಿರೇಮಠ, ಜ್ಯೋತಿ ಗುದ್ದಿನ, ಮೈತ್ರಾ ನಾಗನೂರ, ವನಮಾಲ ಖಾನಗೌಡರ, ನಾರಾಯಣ ಕರಲವಾಡ, ಕೃಷ್ಣಾ ಬೆಂತೂರ, ಎಸ್. ಎನ್. ಪಾಟೀಲ, ಎನ್.ಕೆ. ಕಡೇಮನಿ, ರಾಜೇಶ್ವರಿ ಶಾಸ್ತ್ರಿ, ಮಿಟ್ಟಾ ನಾಯಕ, ಬನ್ನಿಕೊಪ್ಪ, ಜಾಲಿಹಾಳ, ಲೀಲಾವತಿ ಹಿರೇಮಠ, ವಿಜಯಲಕ್ಷ್ಮೀ ಜೋಶಿ, ಉಷಾ, ನೂರಜಹಾನ್ ಕದಾಂಪೂರ, ಶ್ರೀನಿವಾಸ ಬೇವಿನಕಟ್ಟಿ, ಶಾಂತಗೌಡ ಹುಲ್ಲೂರ ಸೇರಿದಂತೆ ಜಿಲ್ಲೆಯ ಅತಿಥಿ ಉಪನ್ಯಾಸಕರು ಉಪಸ್ಥಿತರಿದ್ದರು.



ಒಂದು ತಿಂಗಳಿನಿಂದ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅತಿಥಿ ಉಪನ್ಯಾಸಕರು ಹೋರಾಟ ಮಾಡುತ್ತಿದ್ದಾರೆ. 430 ಪದವಿ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಪಾಠ–ಪ್ರವಚನಗಳಿಲ್ಲದೆ ತೊಂದರೆಗೊಳಗಾಗುತ್ತಿದ್ದಾರೆ. ಸರ್ಕಾರಕ್ಕೆ ಈ ನೋವು ತಟ್ಟುತ್ತಿಲ್ಲ. ಆದಷ್ಟು ಶೀಘ್ರದಲ್ಲಿ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಅತಿಥಿ ಉಪನ್ಯಾಸಕರ ಉದ್ಯೋಗದ ಖಾಯಮಾತಿ ಕೈಗೊಂಡು, ವಿದ್ಯಾರ್ಥಿಗಳ ಹಿತ ಕಾಯಬೇಕೆಂದು ಪ್ರತಿಭಟನಾ ನಿರತ ಅತಿಥಿ ಉಪನ್ಯಾಸಕರು ಸರ್ಕಾರವನ್ನು ಒತ್ತಾಯಿಸಿದರು.

## ಟಿಎಂಸಿ ಸಂಸದರ ವಿರುದ್ಧ ಬಿಜೆಪಿ ಪ್ರತಿಭಟನೆ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರನ್ನು ಟಿಎಂಸಿ ಸಂಸದ ಕಲ್ಯಾಣ ಬ್ಯಾನಜಿ ಅಣಕಿಸಿ ಅಪಹಾಸ್ಯ ಮಾಡಿರುವುದನ್ನು ಖಂಡಿಸಿ ಶಾಸಕ ಸಿ.ಸಿ. ಪಾಟೀಲ ನೇತೃತ್ವದಲ್ಲಿ ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ವತಿಯಿಂದ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಸಿ.ಸಿ. ಪಾಟೀಲ, ಘಟನೆಗೆ ವಿಷಾದ ವ್ಯಕ್ತಪಡಿಸಿ, ಚುನಾಯಿತ ಪ್ರತಿನಿಧಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಸ್ವತಂತ್ರರು. ಆದರೆ ಅದು ಘನತೆ ಮತ್ತು ಸೌಜನ್ಯ ಮೀರಬಾರದರು ಎಂದರು.



ಪ್ರತಿಭಟನೆಯ ಸಂದರ್ಭದಲ್ಲಿ ಬಿಜೆಪಿ ಗದಗ ಜಿಲ್ಲಾಧ್ಯಕ್ಷ ಮುತ್ತಣ್ಣ ಲಿಂಗನಗೌಡ್ರ, ವಿಧಾನ ಪರಿಷತ್ ಸದಸ್ಯ ಎಸ್.ವ್ಹಿ. ಸಂಕನೂರ, ಪಕ್ಷದ ಪ್ರಮುಖರಾದ ಎಂ.ಎಸ್. ಕರಿಗೌಡ್ರ, ಕಾಂತೀಲಾಲ ಬನ್ಸಾಲಿ, ಜಗನ್ನಾಥಸಾ ಭಾಂಡಗೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ರಾಮಪ್ಪ ಮೊರಬದ, ಮಂಜುನಾಥ ಮೆಣಸಗಿ, ಉಮೇಶಗೌಡ ಪಾಟೀಲ, ನಗರ ಅಧ್ಯಕ್ಷ ಅನಿಲ ಅಬ್ಬಿಗೇರಿ, ನಾಗರಾಜ ಕುಲಕರ್ಣಿ, ಅಶೋಕ ಸಂಕಣ್ಣವರ, ಶಿವು ಹಿರೇಮನಿಪಾಟೀಲ, ಭದ್ರೇಶ ಕುಸ್ಲಾಪೂರ, ಸಿದ್ದು ಪಲ್ಲೇದ, ಲಕ್ಷ್ಮಣ ದೊಡ್ಮನಿ, ಮಾಂತೇಶ ನಲವಡಿ, ಅಶೋಕ ಕುಡತಿನಿ, ಬೂದಪ್ಪ ಹಳ್ಳಿ, ಅಶೋಕ ಕರೂರ, ಈರ್ಷಾದ ಮಾನ್ವಿ, ನಾಸಿರ ನೆರಗಲ್, ಮಂಜುನಾಥ ತಳವಾರ, ಸುರೇಶ ಮರಳಪ್ಪನವರ, ಮಂಜುನಾಥ ಶಾಂತಗೇರಿ, ಮಂಜು ಮುಳಗುಂದ, ಪ್ರಶಾಂತ ನಾಯ್ಕರ, ಉಷಾ ಮಹೇಶ ದಾಸರ, ವಿಜಯಲಕ್ಷ್ಮೀ ಮಾನ್ವಿ, ಕಮಲಾಕ್ಷೀ ಗೊಂದಿ, ರೇಖಾ ಬಂಗಾರಶೆಟ್ಟರ, ಅಕ್ಕಮ್ಮ ವಸ್ತ್ರದ, ಸ್ವಾತಿ ಅಕ್ಕಿ, ರಾಚಯ್ಯ ಹೊಸಮಠ, ಅಪ್ಪಣ್ಣ ಟೆಂಗಿನಕಾಯಿ, ಶಾಮಿದಸಾಬ್ ನರಗುಂದ, ವಿನೋದ ಹಂಸನೂರ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

## ಪ್ರತಿಭಾ ಕಾರಂಜಿಯಲ್ಲಿ ಉತ್ತಮ ಸಾಧನೆ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಡಂಬಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಹೆಣ್ಣುಮಕ್ಕಳ ಶಾಲೆಯ ವಿದ್ಯಾರ್ಥಿಗಳು ಬುಧವಾರ ಮುಂಡರಗಿಯಲ್ಲಿ ಜರುಗಿದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಉತ್ತಮ ಸಾಧನೆಗೈದಿದ್ದಾರೆ. ತಸ್ಲೀಮಾ ಸರ್ಕಾವಾಸ ಕನ್ನಡ ಕಂಠಪಾಠ ಸ್ಪರ್ಧೆಯಲ್ಲಿ ಪ್ರಥಮ, ಅನಿತಾ ಕೊರವರ ಚಿತ್ರಕಲೆಯಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಗೆ ಆಯ್ಕೆಯಾಗಿದ್ದಾರೆ. ಸಾಧನೆ ಮಾಡಿದ ಈ ವಿದ್ಯಾರ್ಥಿಗಳಿಗೆ ಎಸ್‌ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು, ಶಾಲಾ ಶಿಕ್ಷಕ ವೃಂದದವರು ಅಭಿನಂದಿಸಿದ್ದಾರೆ.

## ಪ್ರಶಸ್ತಿ ಪ್ರದಾನ ಸಮಾರಂಭ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಕೆಎಲ್‌ಇ ಸಂಸ್ಥೆಯ ಸಿಬಿಎಸ್‌ಇ ಶಾಲೆಯಲ್ಲಿ ಡಿ.22ರ ಸಾಯಂಕಾಲ 4 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಗದಗ ಜಿಮ್ಸ್‌ನ ನಿರ್ದೇಶಕ ಡಾ. ಬಸವರಾಜ ಪಿ.ಬೊಮ್ಮನಹಳ್ಳಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಪ್ರಾಂಶುಪಾಲರಾದ ಕಲ್ಪನಾ ಚಚಡಿ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಸರಕಾರಿ ಶಾಲಾ ಮಕ್ಕಳಿಗೆ ಕಾಶ್ಯಪ್ ಗೈಡ್ ಉಚಿತ ವಿತರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

10ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಹೇಶ ನಾಲವಾಡ ಪ್ರತಿಷ್ಠಾನದಿಂದ ರೂಪಿಸಿದ ಕಾಶ್ಯಪ್ ಗೈಡ್‌ಗಳನ್ನು ಉಚಿತವಾಗಿ ವಿತರಿಸುತ್ತಿದ್ದೇವೆ. ವಿದ್ಯಾರ್ಥಿ ಜೀವನದಲ್ಲಿ ಎಸ್ಸೆಸ್ಸೆಲ್ಸಿ ಪ್ರಮುಖ ಘಟ್ಟ. ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಸುಲಭವಾಗಿ ಎದುರಿಸಲು ಅನುಕೂಲವಾಗುವಂತೆ ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಮತ್ತು ಇಂಗ್ಲಿಷ್ ಪಠ್ಯ ವಿಷಯವನ್ನು ಈ ಪುಸ್ತಕ ಒಳಗೊಂಡಿದೆ ಎಂದು ಪ್ರತಿಷ್ಠಾನದ ಡಾ. ಮಹೇಶ ನಾಲವಾಡ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯುನ್ನುದ್ದೇಶಿಸಿ ಮಾತನಾಡಿದ ಅವರು, ಉತ್ತರ ಕರ್ನಾಟಕ ಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಕಾರ್ಯಕ್ರಮ ರೂಪಿಸಲಾಗಿದ್ದು, ಸದ್ಯ 47 ಸಾವಿರ ಪುಸ್ತಕಗಳನ್ನು ಮುದ್ರಿಸಲಾಗಿದೆ. ಗದಗ ಜಿಲ್ಲೆಯ ಎಲ್ಲ ಸರಕಾರಿ ಪ್ರೌಢಶಾಲೆಗಳ ಮಕ್ಕಳಿಗೆ ಈ ಗೈಡ್‌ನ್ನು ಉಚಿತವಾಗಿ ವಿತರಣೆ ಮಾಡಲಾಗುವುದು ಎಂದರು.

ಡಿ.22ರಂದು ಬೆಳಿಗ್ಗೆ 9.30ಕ್ಕೆ ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆ ಮತ್ತು ವೀರೇಶ್ವರ ಪುಣ್ಯಾಶ್ರಮದ ಪ್ರೌಢಶಾಲೆಗಳ ಮಕ್ಕಳಿಗೆ ಕಾಶ್ಯಪ್ ಗೈಡ್‌ಗಳನ್ನು ಉಚಿತವಾಗಿ ವಿತರಿಸಲಾಗುವುದು. ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆ, ಮಾದರಿ ಪ್ರಶ್ನೆಪತ್ರಿಕೆ (ಉತ್ತರ ಸಹಿತ)ಯನ್ನೂ ಈ ಪುಸ್ತಕದಲ್ಲಿ ನೀಡಲಾಗಿದೆ. ಸರಕಾರಿ ಶಾಲೆ ಮಕ್ಕಳಿಗೆ ಮೊದಲ ಆದ್ಯತೆ ಸಿಗಬೇಕು ಎನ್ನುವುದು ಪ್ರತಿಷ್ಠಾನದ ಉದ್ದೇಶವಾಗಿದೆ ಎಂದರು.

ಮಹೇಶ ನಾಲವಾಡ ಪ್ರತಿಷ್ಠಾನ 2016ರಿಂದಲೂ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಅನೇಕ ಸಮಾಜಮುಖಿ ಕಾರ್ಯಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ವಿಶೇಷವಾಗಿ ಸರಕಾರಿ ಶಾಲಾ ಮಕ್ಕಳಿಗೆ ಶುಚಿತ್ವ, ಆರೋಗ್ಯ ರಕ್ಷಣೆ ವಿಷಯದಲ್ಲಿ ಸಾಕಷ್ಟು ಕೆಲಸ ಮಾಡಿದೆ. ಮುಂದಿನ ವರ್ಷ ಎಲ್ಲ ಜಿಲ್ಲೆಯ ಮಕ್ಕಳಿಗೂ ಈ ಪುಸ್ತಕ ದೊರೆಯುವಂತೆ ಯೋಜನೆ ರೂಪಿಸಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಸಣ್ಣ ಗಾಣಿಗೇರ, ಅಕಿಲ ಹಲಗತ್ತಿ, ರಾಜೇಂದ್ರ ಹೊಂಗಲ ಉಪಸ್ಥಿತರಿದ್ದರು.



## ಸಾಕ್ಷಿ ಸುಭಾಷಿತ

ಶ್ರದ್ಧೆಯಿಂದ ಕೆಲಸ ಮಾಡುವವರು ಮಹತ್ವದ ವಿಜಯ ಸಾಧಿಸಬಲ್ಲರು

–ಎಮರ್ ಸನ್

## ಸಂಪಾದಕೀಯ

### ಹೈಕೋರ್ಟ್ ಸೂಚನೆ ಚಿಂತನಾರ್ಹ

ಬೆಳಗಾವಿ ಜಿಲ್ಲೆಯಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಥಳಿಸಿದ ಪ್ರಕರಣದ ತನಿಖೆ ಚುರುಕುಗೊಂಡಿದೆ. ಪ್ರಕರಣದ ಕುರಿತು ಹೈಕೋರ್ಟ್ ಸುಮೊಟೊ ಕೇಸ್ ದಾಖಲಿಸಿಕೊಂಡಿತ್ತು. ಘಟನೆ ಕುರಿತು ವ್ಯಾಪಕ ಆಕ್ರೋಶ ವ್ಯಕ್ತವಾಗಿದ್ದರಿಂದ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದೆ.

ಈ ಪ್ರಕರಣದ ವಿಚಾರವಾಗಿ ಸರಕಾರಕ್ಕೆ ಹೈಕೋರ್ಟ್ ನೀಡಿದ ಸೂಚನೆ ಚಿಂತನೆಗೆ ನೂಕಿದೆ. ಘಟನೆಯನ್ನು ಕಣ್ಣಾರೆ ಕಂಡರೂ ಮೂಕ ಪ್ರೇಕ್ಷಕರಾಗಿ ನೋಡಿದ ವಂಟಮುರಿ ಗ್ರಾಮದ ಜನರಿಗೆ ಪುಂಡ ದಂಡ ಹಾಕಿ, ಸಂತ್ರಸ್ಥೆಯ ಕುಟುಂಬಕ್ಕೆ ನೀಡುವಂತೆ ಸೂಚನೆ ನೀಡಿರುವುದು ಚಿಂತನೆಗೆ ಕಾರಣವಾಗಿದೆ.

ಘಟನೆಗೆ ಕಾರಣವಾದ ಆರೋಪಿಗಳಿಗಿಂತ ಘಟನೆಯನ್ನು ಇಡೀ ಗ್ರಾಮಸ್ಥರು ಮೂಕಪ್ರೇಕ್ಷಕರಾಗಿ ನಿಂತು ನೋಡಿದ್ದು ಆತಂಕಕಾರಿ. ಸಾಮೂಹಿಕ ಮೂರ್ಖತನ ಸಾಮಾಜಿಕ ವಿಚಾರ ಎನ್ನುವುದನ್ನು ನ್ಯಾಯಪೀಠ ಅತ್ಯಂತ ಗಂಭೀರವಾಗಿ ತನ್ನ ಅಭಿಪ್ರಾಯವನ್ನು ದಾಖಲಿಸಿದೆ.

ಕೇವಲ ಜನರ ವರ್ತನೆ ಕುರಿತು ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿಲ್ಲ, ಕಣ್ಣೆದುರಿಗೆ ಇಂಥ ಘಟನೆ ನಡೆಯುತ್ತಿದ್ದರೂ ಯಾಕೆ ಜನ ಪೊಲೀಸರಿಗೆ ಮಾಹಿತಿ ನೀಡುವುದಿಲ್ಲ. ಸಾಕ್ಷಿ ಹೇಳುವುದಿಲ್ಲ. ಅದಕ್ಕೆ ಕಾರಣ ಏನು ಎನ್ನುವುದರ ಕುರಿತು ಪೊಲೀಸರು ಕಾನೂನು ಆಯೋಗಕ್ಕೆ ಮಾಹಿತಿ ಸಲ್ಲಿಸಬೇಕು ಎಂದು ಸೂಚಿಸಿರುವುದು ಅಷ್ಟೆ ಗಂಭೀರ ವಿಚಾರವಾಗಿದೆ.

ವಂಟಮುರಿ ಘಟನೆ ನಿಜಕ್ಕೂ ಅಮಾನವೀಯ. ಮಹಿಳೆಯನ್ನು ವಿವಸ್ತ್ರಗೊಳಿಸಿದನ್ನು ಮೂಕ ಪ್ರೇಕ್ಷಕರಾಗಿ ನೋಡಿದವರು ಸಹ ಆರೋಪಿಗಳೆ. ಮಾನವೀಯತೆ ಮರೆತು ನಿಂತ ಜನ ಒಂದಷ್ಟು ಧೈರ್ಯ ತೋರಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ. ಆದರೆ ಮಾನವೀಯತೆ ಮರೆತ ಜನರಿಂದ ಅದನ್ನು ನಿರೀಕ್ಷಿಸುವುದಾದರೂ ಹೇಗೆ? ಹೀಗಾಗಿ ಈ ವಿಚಾರದಲ್ಲಿ ಹೈಕೋರ್ಟ್ ಸೂಚನೆಯನ್ನು ಸರಕಾರ ಗಂಭೀರವಾಗಿ ಪರಿಗಣಿಸಿ, ಜನರಿಗೆ ದಂಡ ವಿಧಿಸುವ ಮೂಲಕ ಮಾನವೀಯತೆಯ ಪಾಠ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ.

## ಕಾಶ್ಮೀರ: ಪೂಂಚ್‌ನಲ್ಲಿ ಸೇನಾ ವಾಹನದ ಮೇಲೆ ಉಗ್ರರಿಂದ ಗುಂಡಿನ ದಾಳಿ, ಮೂವರು ಯೋಧರು ಹುತಾತ್ಮ

■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಗುರುವಾರ ಸೇನಾ ವಾಹನದ ಮೇಲೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದು, ಘಟನೆಯಲ್ಲಿ ಕನಿಷ್ಠ ಮೂವರು ಯೋಧರು ಹುತಾತ್ಮರಾಗಿದ್ದಾರೆ ಮತ್ತು ಮೂವರು ಯೋಧರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಠಾಣಮಂಡಿ–ಸುರನಕೋಟೆ ರಸ್ತೆಯ ಸಾವನಿ ಪ್ರದೇಶದಲ್ಲಿ ಹೊಂಚು ಹಾಕಿ ಕುಳಿತಿದ್ದ ಉಗ್ರರು, ಸೇನಾ ವಾಹನದ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ ಎಂದು ಅವರು ಹೇಳಿದ್ದಾರೆ.

ಬುಫ್ಲಿಯಾಜ್ ನಲ್ಲಿ ಬುಧವಾರದಿಂದ ಭಯೋತ್ಪಾದಕರ ವಿರುದ್ಧ ಕಾರ್ಡನ್ ಮತ್ತು ಸರ್ಚ್ ಕಾರ್ಯಾಚರಣೆ ನಡೆಯುತ್ತಿದ್ದು, ಅಲ್ಲಿಗೆ ಯೋಧರನ್ನು ಹೊತ್ತೊಯ್ಯುತ್ತಿದ್ದ ವಾಹನ ಮೇಲೆ ಗುರುವಾರ ಉಗ್ರರು ದಾಳಿ ನಡೆಸಿದ್ದಾರೆ.

ಭಯೋತ್ಪಾದಕರು ಸೇನಾ ವಾಹನದ ಮೇಲೆ ಗುಂಡು ಹಾರಿಸಿದ್ದು, ಕನಿಷ್ಠ ಮೂವರು ಯೋಧರು ಹುತಾತ್ಮರಾಗಿದ್ದಾರೆ ಮತ್ತು ಮೂವರು ಯೋಧರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಅಗಣಿತ ಗಣಿತ ಜ್ಞಾನದ ಗಣಿ, ಗಣಿತ ಮನುಷ್ಯ ಶ್ರೀನಿವಾಸ ರಾಮಾನುಜನ್

# ಗಣಿತವೇ ತಾವಾಗಿ ಬದುಕಿದ ಮೇಧಾವಿ

ಭಾರತದ ಗಣಿತ ಮನುಷ್ಯ ಶ್ರೀನಿವಾಸ ರಾಮಾನುಜನ್ ಅವರ ಜನ್ಮದಿನವಾದ ಡಿಸೆಂಬರ್ 22ರಂದು ಪ್ರತಿ ವರ್ಷ 'ರಾಷ್ಟ್ರೀಯ ಗಣಿತ ಶಾಸ್ತ್ರ ದಿನ' ಎಂದು ಆಚರಿಸಲಾಗುತ್ತದೆ. ಬದುಕಿದ್ದು ಬರೀ 32 ವರ್ಷಗಳಾದರೂ ಗಣಿತ ಶಾಸ್ತ್ರಕ್ಕೆ ಅನಂತ, ಅನನ್ಯ, ಅಮೋಘ ಕೊಡುಗೆ ನೀಡಿದ ಆ ಮಹಾನ್ ಚೇತನದ ಸವಿನೆನಪಿನಲ್ಲಿ ಅವರ ಸೇವೆಯನ್ನು ಸ್ಮರಿಸುವ ಕಾರ್ಯವನ್ನು ಮಾಡಲಾಗುತ್ತದೆ.

ಜಗತ್ತು ಕಂಡ ಶ್ರೇಷ್ಠ ಗಣಿತಜ್ಞ ಶ್ರೀನಿವಾಸನ್ ರಾಮಾನುಜನ್ ಅವರ 125ನೇ ಜನ್ಮ ದಿನಾಚರಣೆಯ ಶುಭ ಸಂಧರ್ಭದಲ್ಲಿ ಅಂದರೆ ಡಿಸೆಂಬರ್ 22, 2012ರಂದು ಅಂದಿನ ಪ್ರಧಾನಿ ಮನಮೋಹನ್ ಸಿಂಗ್ 'ಗಣಿತ ಶಾಸ್ತ್ರ ದಿನಾಚರಣೆ'ಯನ್ನು ಶುಭಾರಂಭ ಮಾಡಿದರು. ಶ್ರೀನಿವಾಸನ್ ರಾಮಾನುಜನ್, 1887ನೇ ಡಿಸೆಂಬರ್ 22ರಂದು ತಮಿಳುನಾಡಿನ ಈರೋಡ್‌ನಲ್ಲಿ ಕಡು ಬಡುತನದ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದವರು. ಆರ್ಥಿಕವಾಗಿ ಅವರದು ಶೂನ್ಯ ಕುಟುಂಬ, ಆದರೆ ಆ ಶೂನ್ಯದಲ್ಲೇ ಸೃಷ್ಟಿಯಾದದ್ದು ರಾಮಾನುಜನ್ ಎಂಬ ಅನಂತ.

ರಾಮಾನುಜನ್ ಗಣಿತವನ್ನೇ ಉಂಡು, ಗಣಿತವನ್ನೇ ಉಸಿರಾಡಿ ಗಣಿತವೇ ತಾವಾಗಿ ಬದುಕಿದವರು. ಬಹಳ ಮೇಧಾವಿಯಾಗಿದ್ದ ಅವರು ತನ್ನ 12ನೇ ವಯಸ್ಸಿಗೆ ತ್ರಿಕೋನಮಿತಿ ಶಾಸ್ತ್ರವನ್ನು ಕರಗತ ಮಾಡಿ ತನ್ನದೇ ಆದ ವಿಚಾರಗಳನ್ನು ಪ್ರತಿಪಾದಿಸಿದರು. ಕಡುಬಡತನವಿದ್ದರೂ ಸ್ನೇಹಿತರಿಂದ ಪುಸ್ತಕಗಳನ್ನು ಪಡೆದು ಓದುತ್ತಿದ್ದರು. ಜೀವನೋಪಾಯಕ್ಕಾಗಿ ಕ್ಲರ್ಕ್ ಕೆಲಸ ಮಾಡಿ ತನ್ನ ಓದಿನ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿದ್ದ ಅವರು, ಗಣಿತಶಾಸ್ತ್ರದ ಅತೀ ಕ್ಲಿಷ್ಟ ಸಮಸ್ಯೆಗಳನ್ನು ಬಿಡಿಸಿ ತನ್ನದೇ ಆದ ಥಿಯರಿ ಮತ್ತು ಹೊಸ ವಿಚಾರಗಳನ್ನು ಪ್ರತಿಪಾದಿಸಬಲ್ಲವರಾಗಿದ್ದರು.

ರಾಮಾನುಜನ್‌ರ ಬುದ್ಧಿಶಕ್ತಿಯನ್ನು ಒಬ್ಬ ಇಂಗ್ಲಿಷ್ ಯುವಕ ಗುರುತಿಸಿ ಅವರನ್ನು ಆಕ್ಸ್‌ಫರ್ಡ್ ಯೂನಿವರ್ಸಿಟಿಯ ಪ್ರೊ. ಹಾರ್ಡಿಯವರ ಬಳಿ ಕಳುಹಿಸುವ ವ್ಯವಸ್ಥೆ ಮಾಡುತ್ತಾನೆ. ಇದರಿಂದಾಗಿ 1913ರಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಜಿ.ಎಚ್. ಹಾರ್ಡಿಯವರಿಂದ ಇವರಿಗೆ ಆಹ್ವಾನ ಸಿಗುತ್ತದೆ. 1914ರಲ್ಲಿ ಇಂಗ್ಲೆಂಡ್‌ಗೆ ತಲುಪಿ ಟ್ರಿನಿಟಿ ಕಾಲೇಜಿಗೆ ಸೇರುತ್ತಾರೆ. 1917ರಲ್ಲಿ ಲಂಡನ್ ಗಣಿತಶಾಸ್ತ್ರ ಸೊಸೈಟಿ




ಇದರ ಸದಸ್ಯರಾಗುತ್ತಾರೆ. 1918ರಲ್ಲಿ ರಾಯಲ್ ಸೊಸೈಟಿ ಫೆಲೋ ಆಗಿ ಆಯ್ಕೆಯಾಗಿ ಅತೀ ಚಿಕ್ಕ ವಯಸ್ಸಿನಲ್ಲಿ ಇದರ ಸದಸ್ಯರಾದ ಹಿರಿಮೆ ಅವರದು.

ಇಂಗ್ಲೆಂಡ್‌ನ ಆಹಾರ ಮತ್ತು ವಾತಾವರಣ ಅವರಿಗೆ ಹಿಡಿಸದೆ ಆರೋಗ್ಯ ಕೈಕೊಡುತ್ತದೆ. 1919ರಲ್ಲಿ ಆರೋಗ್ಯ ಸಮಸ್ಯೆಯಿಂದ ಭಾರತಕ್ಕೆ ವಾಪಸಾಗುತ್ತಾರೆ. ಹದಗೆಟ್ಟ ಆರೋಗ್ಯ ಮತ್ತಷ್ಟು ಕಾಡುತ್ತಿದ್ದರೂ ಅವರ ಗಣಿತ ಪ್ರೀತಿಗೆ ಕೊನೆ ಇರಲಿಲ್ಲ. ಅವರು ಏಪ್ರಿಲ್ 26, 1920ರಂದು 32 ವರ್ಷ, 4 ತಿಂಗಳು, 4 ದಿವಸಗಳ ತರುಣ ವಯಸ್ಸಿನಲ್ಲೇ ತೀರಿಕೊಂಡರು. ಕೇವಲ 32 ವರ್ಷ ಬದುಕಿದ್ದರೂ ಸಾವಿರಾರು ವಿಚಾರಗಳನ್ನು, ಪ್ರಬಂಧಗಳನ್ನು ಬರೆದು, ನೂರಾರು ಸಂಶೋಧನೆಗಳನ್ನು ಮಾಡಿ ಯುವ ಪೀಳಿಗೆಗೆ ಬಹಳಷ್ಟು ಸ್ಫೂರ್ತಿ ನೀಡಿ ಗಣಿತಶಾಸ್ತ್ರಕ್ಕೆ ಅದ್ಭುತವಾದ ಕೊಡುಗೆ ನೀಡಿದ್ದನ್ನು ಜಗತ್ತು ಮರೆಯದು.

**ಈ ಹಾರ್ಡಿ–ರಾಮಾನುಜನ್ ನಂಬರ್‌ನ ಹಿಂದೆ ಒಂದು ರೋಚಕ ಕತೆ ಇದೆ. ಒಮ್ಮೆ ರಾಮಾನುಜನ್ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದಾಗ ಅವರನ್ನು ನೋಡಲು ಬ್ರಿಟಿಷ್ ಗಣಿತಜ್ಞ ಡಿ.ಎಚ್. ಹಾರ್ಡಿ ಅವರು ಟ್ಯಾಕ್ಸಿಯಲ್ಲಿ ಬಂದಿದ್ದರು. ಅದರ ನಂಬರ್ 1729. ರಾಮಾನುಜನ್ ಜೊತೆ ಉಭಯಕುಶಲೋಪರಿಯನ್ನು ವಿಚಾರಿಸುತ್ತಾ ಇರುವಾಗ ಹಾರ್ಡಿ ಅವರು ರಾಮಾನುಜನ್‌ರಿಗೆ "1729 ಬಹಳ ಡಲ್ ಆಗಿರುವ ಏನೂ ವಿಶೇಷತೆ ಇಲ್ಲದ ನಂಬರ್" ಎನ್ನುತ್ತಾರೆ. ಆಗ ರಾಮಾನುಜನ್, '1729 ಇದೊಂದು ಅತೀ ವಿಶೇಷ ಸಂಖ್ಯೆಯಾಗಿದ್ದು, 2 ಸಂಖ್ಯೆಗಳ ಕ್ಯೂಬ್‌ಗಳನ್ನು ಕೂಡಿಸುವಾಗ ಸಿಗುವ ಎರಡನೇ ಅತೀ ಚಿಕ್ಕ ನಂಬರ್ ಇದಾಗಿದೆ ಮತ್ತು ಎರಡು ರೀತಿಯಲ್ಲಿಯೂ ಈ ಸಂಖ್ಯೆಯನ್ನು ಕ್ಯೂಬ್‌ಗಳ ಮೊತ್ತವಾಗಿ ಕಾಣಬಹುದು' ಎಂದಿದ್ದರು.**

ಭಾರತದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂರವರು ತಮ್ಮ 'ಡಿಸ್ಕವರಿ ಆಫ್ ಇಂಡಿಯಾ'ದಲ್ಲಿ ಹೀಗೆ ನುಡಿಯುತ್ತಾರೆ. "ಭಾರತದಲ್ಲಿ ಗಣಿತದ ವಿಚಾರದಲ್ಲಿ, ಇತ್ತೀಚಿಗಿನ ಅಸಾಧಾರಣ ವ್ಯಕ್ತಿಯ ಕುರಿತು ಯೋಚಿಸುವುದು ಅನಿವಾರ್ಯವಾಗುವಂತೆ ಮಾಡುತ್ತದೆ.

ಅವರೇ ಶ್ರೀನಿವಾಸ ರಾಮಾನುಜನ್. ಸಂಖ್ಯೆ ಹಾಗೂ ಸಮೀಕರಣಗಳೊಂದಿಗೆ ಅವರು ಬಿಡುವಿನ ಸಮಯದಲ್ಲಿ ಆಟವಾಡುತ್ತಿದ್ದರು. ಇಂಗ್ಲೆಂಡಿನ ರಾಯಲ್ ಸೊಸೈಟಿ ತನ್ನ ನಿಯಮಗಳನ್ನು ಭಾಗಶಃ ಸಡಿಲಿಸಿ ಅವರನ್ನು ಜೊತೆಗಾರನಾಗಿ ಆಯ್ಕೆ ಮಾಡಿತು. ರಾಮಾನುಜನ್ ಈ ಶತಮಾನದ ಶ್ರೇಷ್ಠತಮ ಗಣಿತಜ್ಞ" ಎಂದಿದ್ದಾರೆ.



**– ಈಶ್ವರ ಸೋ.ಮೆಡ್ಲೇರಿ.**
**ಅಧ್ಯಕ್ಷರು, ಕಸಾಪ–ಲಕ್ಷ್ಮೇಶ್ವರ.**

### ಶ್ರೇಷ್ಠ ಗಣಿತಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್‌ರ ಜನ್ಮದಿನದ ನಿಮಿತ್ತ ಲೇಖನ

# 'ರಾಷ್ಟ್ರೀಯ ಗಣಿತ ದಿನ'ದ ಹಿನ್ನೆಲೆ

ಶ್ರೀನಿವಾಸ ರಾಮಾನುಜನ್ ಈ ಹೆಸರು ಕೇಳದ ಭಾರತೀಯ ಯಾರಿದ್ದಾರೆ ಹೇಳಿ? ಗಣಿತಶಾಸ್ತ್ರದಲ್ಲಿ ತಮ್ಮದೇ ಆದ ಮಹತ್ತರ ಕೊಡುಗೆ ನೀಡಿದ ಭಾರತೀಯ ಗಣಿತಶಾಸ್ತ್ರಜ್ಞರು ರಾಮಾನುಜನ್. ಅವರ ಜನ್ಮದಿನವಾದ ಡಿಸೆಂಬರ್ 22ರಂದು 'ರಾಷ್ಟ್ರೀಯ ಗಣಿತ ದಿನ'ವಾಗಿ ಆಚರಣೆ ಮಾಡಲಾಗುತ್ತದೆ.

ಪ್ರತಿನಿತ್ಯ ಮನುಷ್ಯನ ಜೀವನದಲ್ಲಿ ಗಣಿತ ಒಂದಲ್ಲ ಒಂದು ರೂಪದಲ್ಲಿ ಬಳಕೆಯಾಗುತ್ತಲೇ ಇರುತ್ತದೆ. ಅದು ದೊಡ್ಡ ಮಟ್ಟದಲ್ಲಿರಬಹುದು, ಇಲ್ಲವೇ ಸಣ್ಣ ಮಟ್ಟದಲ್ಲಿರಬಹುದು. ಲೆಕ್ಕಕ್ಕೂ–ಮನುಷ್ಯ ಜೀವನಕ್ಕೂ ಅವಿನಾಭಾವ ಸಂಬಂಧವಿದೆ. ಬಾಲ್ಯದಿಂದಲೇ ಗಣಿತದಲ್ಲಿ ಅಪರಿಮಿತ ಆಸಕ್ತಿ ಬೆಳೆಸಿಕೊಂಡಿದ್ದ ರಾಮಾನುಜನ್ ಅವರ ಸಾಧನೆ ಸಣ್ಣದೇನಲ್ಲ. ಜನ್ಮತಃ ಬಡತನದಲ್ಲೇ ಬೆಂದ ಇವರು ಅನೇಕ ಗಣಿತ ಸಿದ್ಧಾಂತಗಳನ್ನು ಮಂಡಿಸಿದವರು.

26ನೇ ವಯಸ್ಸಿನಲ್ಲಿ ರಾಮಾನುಜನ್ ಅವರನ್ನು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಕ್ಕೆ ಅನಂತ ಸರಣಿಗಳು, ಮುಂದುವರಿದ ಭಿನ್ನರಾಶಿಗಳು, ಅಸಮರ್ಪಕ ಅನುಕಲನಗಳು ಮತ್ತು ಸಂಖ್ಯಾ ಸಿದ್ಧಾಂತದ ಕುರಿತು 120 ಗಣಿತದ ಪ್ರಮೇಯಗಳ ಹೇಳಿಕೆಗಳಿಗಾಗಿ ಅವರನ್ನು ಆಹ್ವಾನಿಸಲಾಗಿತ್ತು. ಟ್ರಿನಿಟಿ ಕಾಲೇಜಿನಲ್ಲಿ ಫೆಲೋ ಆಗಿ ಆಯ್ಕೆಯಾದ ಮೊದಲ ಭಾರತೀಯ ಶ್ರೀನಿವಾಸ ರಾಮಾನುಜನ್. 3 ಸಾವಿರಕ್ಕೂ ಹೆಚ್ಚು ಗಣಿತದ ಫಲಿತಾಂಶಗಳು ಮತ್ತು ಸಮೀಕರಣಗಳನ್ನು ಸಂಗ್ರಹಿಸಿದ ನಂತರ, ಗಣಿತಜ್ಞ 1919ರಲ್ಲಿ ಭಾರತಕ್ಕೆ ಮರಳಿದರು.

ಮಡಿವಂತಿಕೆ ಹಾಗೂ ಶಾಖಾಹಾರದ ಅಭ್ಯಾಸದಿಂದ ಬಹಳ ಉಸಿರುಗಟ್ಟುವ ಸನ್ನಿವೇಶವಿದ್ದಾಗ್ಯೂ ಈ ಕಷ್ಟಗಳಿಂದ ವಿಚಲಿತರಾಗದೆ ಕೇವಲ ತಮ್ಮ ಸಂಶೋಧನೆಯ ಮೇಲೆ ಮಾತ್ರ



ಕೇಂದ್ರೀಕರಿಸಿ, ತಾವು ಕೇಂಬ್ರಿಡ್ಜ್‌ನಲ್ಲಿದ್ದ ಐದು ವರ್ಷಗಳ ಕಾಲ ಅತ್ಯದ್ಭುತವಾದ ಗಣಿತ ಸಾಧನೆಯನ್ನು ಮಾಡಿದ ಹಿರಿಮೆ ರಾಮಾನುಜನ್ ಅವರದ್ದು.

ಜೀವನವಿಡೀ ಆರೋಗ್ಯದ ತೊಂದರೆಗಳಿಂದ ಬಾಧಿತರಾಗಿದ್ದ ರಾಮಾನುಜನ್ ಅವರ ಆರೋಗ್ಯ ಲಂಡನ್ನಿನಲ್ಲಿ ಮತ್ತಷ್ಟು ಹದಗೆಟ್ಟಿತು. ಜೀವಸತ್ವಗಳ ಕೊರತೆ ಮತ್ತು ಕ್ಷಯ ರೋಗದಿಂದ ನರಳಿದ ರಾಮಾನುಜನ್ 1919ರಲ್ಲಿ ಭಾರತಕ್ಕೆ ಮರಳಿದರು. ಅವರ ಶುಶ್ರೂಷೆಗಾಗಿ ಮಾಡಿದ ಎಲ್ಲಾ ಪ್ರಯತ್ನಗಳು ವಿಫಲವಾಗಿ ಕೊನೆಗೆ 1920ರ ಏಪ್ರಿಲ್ 26ರಂದು ದೇಹಾಂತ್ಯವಾಯಿತು. ಅವರ ಪ್ರೀತಿಪಾತ್ರರಾಗಿದ್ದ ವೃದ್ಧ ತಾಯಿ ಕೋಮಲತ್ತಮ್ಮಾಳ್ ಶೋಕತಪ್ತರಾದರು. ಅವರ ಪತ್ನಿ ಜಾನಕಿಯಮ್ಮಾಲ್‌ಗೆ ಆಗ ಕೇವಲ 20 ವರ್ಷ. ಚೆನ್ನೈ ನಗರದ ಸಮೀಪವೇ ಇದ್ದು 94 ವರ್ಷಗಳ ಕಾಲ ಬದುಕಿದ್ದ ಅವರು 1994ರಲ್ಲಿ ನಿಧರಾದರು. ಹೀಗೆ ರಾಮಾನುಜನ್ ಎಂಬ ಜಗದ್ವಿಖ್ಯಾತವಾದ ಒಂದು ಅಪೂರ್ವ ಗಣಿತ ಪ್ರತಿಭೆಯ ದೀಪ ನಂದಿತು.

ರಾಷ್ಟ್ರದ ಯುವ ಪೀಳಿಗೆಗೆ ಗಣಿತ ಕ್ಷೇತ್ರಕ್ಕೆ ಕೊಡುಗೆ ನೀಡಿದ ನಮ್ಮದೇ ದೇಶದ ಗಣಿತಜ್ಞ ಶ್ರೀನಿವಾಸ ರಾಮಾನುಜನ್‌ರ ಕೊಡುಗೆಗಳನ್ನು ತಿಳಿಸುವುದು, ಯುವ ಪೀಳಿಗೆಯಲ್ಲಿ ಗಣಿತವನ್ನು ಕಲಿಯಲು ಪ್ರೇರೇಪಿಸಲು, ಯುವಕರಲ್ಲಿ ಗಣಿತ ಕಲಿಕೆಯಿಂದ ಆಗುವ ಉಪಯೋಗಗಳನ್ನು ತಿಳಿಸುವುದು ಈ ದಿನದ ಆಚರಣೆಯ ಮುಖ್ಯ ಉದ್ದೇಶ. ಗಣಿತ ದಿನ ಆಚರಣೆ ದಿನದಂದು ಶಿಬಿರಗಳ ಮೂಲಕ ಗಣಿತ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಲಾಗುತ್ತದೆ. ಸಂಬಂಧಿತ ಕ್ಷೇತ್ರಗಳಲ್ಲಿ ಗಣಿತ ಮತ್ತು ಸಂಶೋಧನೆಗಾಗಿ ಬೋಧನಾ–ಕಲಿಕಾ ಸಾಮಗ್ರಿಗಳ ಅಭಿವೃದ್ಧಿ, ಉತ್ಪಾದನೆ ಮತ್ತು ಪ್ರಸರಣದ ಬಗ್ಗೆ ಅರಿವು ಮೂಡಿಸಲಾಗುತ್ತದೆ.



**– ಎಂ.ಎಚ್. ಸವದತ್ತಿ.**
**ಸರ್ಕಾರಿ ಪ್ರೌಢಶಾಲೆ–ಏಕಲಾಸಪೂರ.**

# ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ತೋಂಟದಾರ್ಯ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ 2023–24ನೇ ಸಾಲಿನ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ವರ್ಣರಂಜಿತ ರಂಗವಲ್ಲಿಯ ಸೊಬಗಿನೊಂದಿಗೆ ಸಾಂಪ್ರದಾಯಿಕವಾಗಿ ಸಸಿಗೆ ನೀರುಣಿಸಿ ಉದ್ಘಾಟನೆಗೊಂಡ ಕಾರ್ಯಕ್ರಮದಲ್ಲಿ ಹೊಸ ವಿದ್ಯಾರ್ಥಿಗಳಿಗೆ ಗೌರವದಿಂದ ಪ್ರವೇಶ ನೀಡಲಾಯಿತು. ಹಿರಿಯ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಶುಭ ಕಾಮನೆಗಳೊಂದಿಗೆ ನವ ಯುಗದ ಶಿಲ್ಪಿಗಳನ್ನು ಸ್ವಾಗತಿಸಿದರು.



ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಎಂ.ಎಂ. ಅವಟಿ ಮಾತನಾಡಿ, ಇಂಜಿನಿಯರಿಂಗ್ ಕಲೆಯು ಕೇವಲ ಪಠ್ಯ–ಪುಸ್ತಕಗಳಿಗೆ ಸೀಮಿತವಾಗಿರುವುದಿಲ್ಲ. ಇದು ನಿರಂತರ ಕಲಿಕೆ. ಸೃಜನಶೀಲತೆ, ಸಮಸ್ಯೆಗಳನ್ನು ಪರಿಹರಿಸುವ ಚತುರತೆ ಮತ್ತು ಹೊಸತನವನ್ನು ಸ್ವಾಗತಿಸುವ ಮನೋಭಾವದ ಸಂಗಮ. ಹೆಚ್ಚು ಕನಸುಗಳನ್ನು ಕಾಣಿ, ಅವನ್ನು ಪೋಷಿಸಿ ಮತ್ತು ಬೆಳೆಗಿಸಿ. ಭವಿಷ್ಯದ ಭವ್ಯ ನಿರ್ಮಾಣಕ್ಕೆ ನಾಂದಿ ಹಾಡಿ ಎಂದು ಪ್ರೇರೇಪಿಸಿದರು.

ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಈರಣ್ಣ ಕೋರಚಗಾಂವ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಹಿರಿಯ ವಿದ್ಯಾರ್ಥಿಗಳು ಸ್ವಾಗತ ಗೀತೆ ಹಾಡಿ, ನೃತ್ಯ ಪ್ರದರ್ಶನ ನೀಡಿ ಹೊಸಬರಿಗೆ ಸಂತಸದ ವಾತಾವರಣವನ್ನು ಸೃಷ್ಟಿಸಿದರು.

ಪ್ರೊ. ಎಸ್.ಎಸ್. ಕಂದಗಲ್ಲ, ಪ್ರೊ. ಮಲ್ಲಿಕಾರ್ಜುನ, ಪ್ರೊ. ಜಗದೀಶ ಶಿವನಗುತ್ತಿ, ಪ್ರೊ. ಸಂತೋಷಕುಮಾರ, ಪ್ರೊ. ಮೃತ್ಯುಂಜಯ ಹೂಗಾರ ಉಪಸ್ಥಿತರಿದ್ದರು. ವಿಶೇಷ ಸಾಧಕರಿಗೆ ಪ್ರಶಸ್ತಿಪತ್ರಗಳನ್ನು ನೀಡಲಾಯಿತು.

# ಸ್ವಿಮಿಂಗ್ ಚತುರ ಐದರ ಪೋರ

■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ನಗರದ ಬಾಲ ಪ್ರತಿಭೆ ಅಗಸ್ತ್ಯ 3 ವರ್ಷ ವಯಸ್ಸಿನಲ್ಲೇ ಸ್ವಿಮ್ಮಿಂಗ್‌ನ್ನು ಪರಿಪೂರ್ಣವಾಗಿ ಕಲಿಯುವ ಮೂಲಕ ಅಚ್ಚರಿ ಮೂಡಿಸಿದ್ದ. ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರ ತರುವಲ್ಲಿ ಸದಾ ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸುವ ರಾಘವೇಂದ್ರ ಅರಕೇರಿ ಅವರು ಇಂದು ತಮ್ಮ ಮಗನಿಗೆ ಎಲ್ಲಾ



ಚಟುವಟಿಕೆಗಳನ್ನು ಕಲಿಸಬೇಕೆಂಬ ಹಂಬಲ ಹೊತ್ತು ಒಂದು ವರ್ಷ ವಯಸ್ಸಿನಿಂದಲೇ ಕರಾಟೆ, ಡ್ಯಾನ್ಸ್, ಸ್ಕೇಟಿಂಗ್, ಯೋಗ, ಸ್ವಿಮ್ಮಿಂಗ್, ಅಭಿನಯ ಹೀಗೆ ಹಲವಾರು ರಂಗದಲ್ಲಿ ಅಗಸ್ತ್ಯನ ಪ್ರತಿಭೆ ಗುರುತಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇದೀಗ ಐದರ ಪೋರ ಅಗಸ್ತ್ಯ ಸ್ವಿಮ್ಮಿಂಗ್ ಚತುರನಾಗಿ ಹೊರಹೊಮ್ಮಿದ್ದು, ಅಗಸ್ತ್ಯನ ಪ್ರತಿಭೆ ಇತರರಿಗೂ ಮಾದರಿಯಾಗಲಿ ಎಂದು ಕ್ರೀಡಾಭಿಮಾನಿಗಳು ಶುಭ ಹಾರೈಸಿದ್ದಾರೆ.

### ಕೆಸಿಸಿ ಬ್ಯಾಂಕ್ ಶಾಖೆ ಪ್ರಾರಂಭಿಸುವ ಕುರಿತು ಪೂರ್ವಭಾವಿ ಸಭೆ

# ಗ್ರಾಹಕ ಸ್ನೇಹಿ ಬ್ಯಾಂಕ್ ಸ್ಥಾಪನೆಗೆ ಕೈಜೋಡಿಸಿ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಗ್ರಾಮೀಣ ಭಾಗದಲ್ಲಿ ಸಹಕಾರ ಸಂಘ ಬಲಗೊಳ್ಳಬೇಕು. ಕೃಷಿ, ವ್ಯಾಪಾರ, ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುವುದು ಕೃಷಿ ಪತ್ತಿನ ಸಹಕಾರಿ ಸಂಘದ ಮೂಲ ಉದ್ದೇಶವಾಗಿದೆ. ರೈತರಿಗೆ, ಗ್ರಾಹಕರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಿಂತ ಕಡಿಮೆ ಬಡ್ಡಿ ದರದಲ್ಲಿ ಗಣಿಕೀಕೃಕ ಮತ್ತು ಪಾರದರ್ಶಕವಾಗಿ ಸಾಲ ನೀಡಿ, ರೈತರು ಆರ್ಥಿಕ ಸಬಲತೆ ಹೊಂದಲು ಸಹಕಾರ ಸಂಘ ಅತ್ಯಂತ ಮಹತ್ವದ ಪಾತ್ರ ವಹಿಸಲಿದೆ ಎಂದು ನೂತನ ಧಾರವಾಡ ಕೆಸಿಸಿ ಬ್ಯಾಂಕ್ ಅಧ್ಯಕ್ಷ ಶಿವಕುಮಾರಗೌಡ ಎಸ್.ಪಾಟೀಲ ಹೇಳಿದರು.

ಡಂಬಳ ಗ್ರಾಮದ ತೋಂಟದಾರ್ಯ ಕಲಾ ಭವನದಲ್ಲಿ ಕರ್ನಾಟಕ ಸೆಂಟ್ರಲ್ ಕೋ ಆಪ್–ಬ್ಯಾಂಕ್ ಡಂಬಳ ಗ್ರಾಮದಲ್ಲಿ ನೂತನವಾಗಿ ಶಾಖೆ ಪ್ರಾರಂಭಿಸುವ ಕುರಿತು ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಧಾರವಾಡ, ಹಾವೇರಿ, ಗದಗ ಜಿಲ್ಲೆಯಲ್ಲಿ 48 ಶಾಖೆಗಳನ್ನು



ನಮ್ಮ ಸಂಸ್ಥೆಯು ಹೊಂದಿದೆ. ನಾನು ಅಧಿಕಾರ ವಹಿಸಿಕೊಂಡ ನಂತರ ಪ್ರತಿ ತಿಂಗಳು ನಮ್ಮ ಸಂಘದಲ್ಲಿ ಅತಿ ಹೆಚ್ಚು ಜನರು ಸದಸ್ಯರನ್ನಾಗಿ ಮಾಡುವ ಗುರಿ ಹೊಂದಿದ್ದೇವೆ. ಗ್ರಾಹಕರಿಗೆ ನಮ್ಮ ಸಂಘ ಜನಸ್ನೇಹಿಯಾಗುವ ಮೂಲಕ ಮಾದರಿಯಾಗಲಿದೆ ಎಂದರು.

ತೋಂಟದಾರ್ಯ ಮಠದ ವ್ಯವಸ್ಥಾಪಕ ಜಿ.ವಿ. ಹಿರೇಮಠ ಸಾನ್ನಿಧ್ಯ ವಹಿಸಿದ್ದರು. ವೇದಿಕೆಯ ಮೇಲೆ ಗದಗ ಕೆಸಿಸಿ ಬ್ಯಾಂಕ್ ನಿರ್ದೇಶಕ ಸಿ.ಬಿ. ದೊಡ್ಡಗೌಡ, ಮುಖಂಡರಾದ ವಿ.ಟಿ. ಮೇಟಿ, ಬೀರಪ್ಪ ಬಂಡಿ, ಬಸವರಾಜ

ಧಾರವಾಡ ಶಾಖೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಮುನಿಯಪ್ಪ, ಪ್ರಧಾನ ವ್ಯವಸ್ಥಾಪಕ ಶಿವಾನಂದ ವಿ.ಹೂಗಾರ ಮಾತನಾಡಿ, ಭಾರತೀಯ ರಿಸರ್ವ್ ಬ್ಯಾಂಕ್ ಹೊಸದಾಗಿ 17 ಶಾಖೆ ತೆರೆಯಲು ಅನುಮತಿದೆ ನೀಡಿದೆ. ಬ್ಯಾಂಕ್ ಸ್ಥಾಪನೆಗೆ ಬಂಡವಾಳ ಅವಶ್ಯವಾಗಿದ್ದು ಕನಿಷ್ಠ 3ರಿಂದ 5 ಕೋಟಿ ರೂ. ಠೇವಣಿ ಇಡಬೇಕು. ಬ್ಯಾಂಕ್‌ನ ಬೆಳವಣಿಗೆಗೆ ಸಾರ್ವಜನಿಕರ ಸಹಭಾಗಿತ್ವ ಮಹತ್ವದಾಗಿದ್ದು, ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕೆಂದರು.

ಪೂಜಾರ, ಎಸ್.ಬಿ. ಹೂಗಾರ, ಮಲ್ಲಣ್ಣ ಯರಾಶಿ, ಮಹೇಶ ಗಡಗಿ, ಬಸವರಡ್ಡಿ ಬಂಡಿಹಾಳ, ಹಾಲಪ್ಪ ಕಬ್ಬೇರಹಳ್ಳಿ, ಸುರೇಶ ಗಡಗಿ, ಬಾಬುಸಾಬ್ ಮೂಲಿಮನಿ, ಜಾಕೀರ ಮೂಲಿಮನಿ, ಮುಂಡರಗಿ ಶಾಖಾ ನಿರೀಕ್ಷಕ ಕೆ.ಬಿ. ದೊಡ್ಡಮನಿ, ಮುಂಡರಗಿ ಕೆ.ಸಿ.ಸಿ ಬ್ಯಾಂಕ್ ಮುಖ್ಯಾಧಿಕಾರಿ ಎಸ್.ಬಿ. ಕೂಗು, ಮಹಮ್ಮದರಫೀಕ ನಮಾಜಿ, ಮಹಾಂತೇಶ ಸುರಕೂಡ ಮುಂತಾದವರಿದ್ದರು. ರಮೇಶ ಕೋರ್ಲಹಳ್ಳಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಡಿ.29ರಂದು ವಿಶ್ವ ಮಾನವ ದಿನಾಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ



ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನದ ನಿಮಿತ್ತ ವಿಶ್ವ ಮಾನವ ದಿನಾಚರಣೆಯನ್ನು ಡಿ. 29 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ವ್ಯವಸ್ಥಿತವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾದಿಕಾರಿ ಅನ್ನಪೂರ್ಣ ಎಂ. ತಿಳಿಸಿದರು.

ಜಿಲ್ಲಾಡಳಿತ ಭವನದ ವಿ.ಸಿ.ಹಾಲ್‌ದಲ್ಲಿ ಗುರುವಾರದಂದು ವಿಶ್ವ ಮಾನವ ದಿನಾಚರಣೆ ಕುರಿತು ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಶ್ವ ಮಾನವ ದಿನಾಚರಣೆಯ ಕಾರ್ಯಕ್ರಮಕ್ಕೆ ಎಲ್ಲ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು. ಕಾಲೇಜು ಮಟ್ಟದಲ್ಲಿ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ದಿನಾಚರಣೆ ದಿನದಂದು ಬಹುಮಾನ ವಿತರಿಸಲಾಗುವುದು.

ಶಿಷ್ಟಾಚಾರದನ್ವಯ ಆಮಂತ್ರಣ ಪತ್ರಿಕೆ ಮುದ್ರಣ ಮುದ್ರಿಸಲಾಗುವುದು. ಕಾರ್ಯಕ್ರಮದಲ್ಲಿ ಗಣ್ಯರನ್ನು ಆಹ್ವಾನಿಸಲಾಗುವುದು.

ಕುವೆಂಪು ಅವರ ಜೀವನ ಸಾಧನೆ ಕುರಿತು ಉಪನ್ಯಾಸ ಕಾರ್ಯಕ್ರಮವನ್ನೂ ಸಹ ಏರ್ಪಡಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ವೀರಯ್ಯ ಸ್ವಾಮಿ ಬಿ ಸ್ವಾಗತಿಸಿ ವಂದಿಸಿದರು.

ಸಭೆಯಲ್ಲಿ ಐ.ಕೆ.ಕಮ್ಮಾರ, ಡಿ.ವಿ.ಬಡಿಗೇರ, ಅಂದಾನೆಪ್ಪ ವಿಭೂತಿ,ಮೌನೇಶ ಬಡಿಗೇರ, ಬಸವರಾಜ ವಾಲಿ ಸೇರಿದಂತೆ ಇತರರು ಹಾಜರಿದ್ದರು.

## ಸಿದ್ದಲಿಂಗ ನಗರದ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಚಿಂತನ ಮಂಥನ

# ಜೀವನಕ್ಕೆ ಬೆಳಕು ನೀಡುವುದೇ ಶಿಕ್ಷಣ

■ವಿಜಯಸಾಕ್ಷಿ ಸುದ್ದಿ, ಗದಗ

ನಮ್ಮ ಬದುಕಿನಲ್ಲಿ ಭರವಸೆ ಇದ್ದರೆ ಭವ್ಯ ಭವಿಷ್ಯವನ್ನು ರೂಪಿಸುವ ದಾರಿ ತಾನಾಗಿಯೇ ಕಾಣಿಸುತ್ತದೆ. ಜೀವನದಲ್ಲಿ ಉತ್ಸಾಹ ಇದ್ದರೆ ಕನಸನ್ನು ನನಸಾಗಿಸುವ ಬಾಗಿಲು ತಾನಾಗಿಯೇ ತೆರೆಯುತ್ತದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಎಂ.ಎ. ರಡ್ಡೇರ್ ಅಭಿಪ್ರಾಯಪಟ್ಟರು.

ಅವರು ಸಭಾಪತಿ ಬಸವರಾಜ್ ಹೊರಟ್ಟಿ ದಂಪತಿಗಳಿಂದ ದತ್ತು ಪಡೆದ ಸ್ಥಳೀಯ ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ 'ಸಾಧಿಸುವ ಛಲವೊಂದಿದ್ದರೆ ಅಸಾಧ್ಯವಾದುದನ್ನು ಸಾಧ್ಯವಾಗಿಸಬಹುದು' ಎಂಬ ವಿಷಯದ ಕುರಿತು 'ಅವ್ವ ಸೇವಾ ಟ್ರಸ್ಟ್' ಹುಬ್ಬಳ್ಳಿ ಇವರು ಆಯೋಜಿಸಿದ್ದ ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜೀವನಕ್ಕೆ ಬೆಳಕು ನೀಡುವುದೇ ಶಿಕ್ಷಣ. ಈ ಅರಿವಿನೊಂದಿಗೆ ಪ್ರತಿ ಹೆಜ್ಜೆಯನ್ನೂ ಎಚ್ಚರಿಕೆಯಿಂದ ಇಟ್ಟರೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯ. ಅದಕ್ಕಾಗಿ ವಿದ್ಯಾರ್ಥಿ ಜೀವನವನ್ನು ಅಷ್ಟು ಹಗುರವಾಗಿ ತೆಗೆದುಕೊಳ್ಳದೆ ಹೆಜ್ಜೆ ಇಡುವಂತೆ ರಡ್ಡೇರ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.




ಅವ್ವ ಸೇವಾ ಟ್ರಸ್ಟಿನ ಸಂಚಾಲಕ ಡಾ. ಬಸವರಾಜ್ ಧಾರವಾಡ ಮಾತನಾಡಿ, ತಂದೆ-ತಾಯಿ ಇಬ್ಬರೂ ಮಕ್ಕಳನ್ನು ಮುದ್ದಿನಿಂದ ಬೆಳೆಸದೆ, ಸಂಪತ್ತಿನ ಅಹಂಕಾರದಿಂದ ಬೆಳೆಸದೆ, ಶಿಸ್ತಿನಿಂದ, ನಿಯತ್ತಿನಿಂದ ಮತ್ತು ಸಂಸ್ಕಾರವಂತರಾಗಿ ಬೆಳೆಸಿದರೆ ಮಕ್ಕಳು ಎಂದಿಗೂ ದಾರಿ ತಪ್ಪುವುದಿಲ್ಲ. ಆ ನಿಟ್ಟಿನಲ್ಲಿ ಮನೆಯಲ್ಲಿ ಇಂತಹ ವಾತಾವರಣ ಸೃಷ್ಟಿಯಾಗುವಂತೆ ಹೆತ್ತವರು ನೋಡಿಕೊಳ್ಳಬೇಕು. ಎಲ್ಲವನ್ನೂ ಶಾಲೆಯಿಂದ, ಶಿಕ್ಷಕರಿಂದ ನಿರೀಕ್ಷಿಸದೆ ಮಕ್ಕಳನ್ನು ಬೆಳೆಸುವಲ್ಲಿ, ತಿದ್ದಿ ತೀಡುವಲ್ಲಿ ಪಾಲಕರಾದ ತಮ್ಮ ಜವಾಬ್ದಾರಿ ಸಹ ಇದೆ ಎಂಬ ಅರಿವು ಪ್ರತಿಯೊಬ್ಬ ಪಾಲಕರಿಗೆ ಇರಬೇಕು ಎಂದು ಹೇಳಿದರು.

> ಜೀವನದಲ್ಲಿ ಯಾವುದೂ ಅಸಾಧ್ಯವಲ್ಲ. ಸಾಧಿಸುವ ಛಲ, ನಿರ್ದಿಷ್ಟ ಗುರಿ ಹೊಂದಿದ್ದರೆ ಅಸಾಧ್ಯವಾದುದನ್ನೂ ಸಾಧ್ಯವಾಗಿಸಬಹುದು. ಸಾಧಿಸಿದ ಮಹನೀಯರ ಜೀವನ ಚರಿತ್ರೆಯನ್ನೊಮ್ಮೆ ಮೆಲುಕು ಹಾಕಿ ನೋಡಿ. ನಿಮಗೂ ಕನಸುಗಳು ಬೀಳುತ್ತವೆ. ಅಂತೆಯೇ ವಿದ್ಯಾರ್ಥಿ ಜೀವನ ಅತ್ಯಮೂಲ್ಯವಾದದ್ದು. ಭವಿಷ್ಯದ ಬದುಕನ್ನು ಭವ್ಯವಾಗಿ, ಸುಂದರವಾಗಿ ಕಟ್ಟಿಕೊಳ್ಳಬೇಕಾದರೆ ವಿದ್ಯಾರ್ಥಿ ಜೀವನದ ಮೂಲಕ ಮಾತ್ರ ಸಾಧ್ಯ.
>
> – ಎಂ.ಎ. ರಡ್ಡೇರ್.
> ಉಪನಿರ್ದೇಶಕರು, ಸಾ.ಶಿ. ಇಲಾಖೆ.

ಈ ಸಂದರ್ಭದಲ್ಲಿ ಎಸ್.ಎಂ. ಅಗಡಿ ಶಾಲೆಯ ನಿವೃತ್ತ ಮುಖೋಪಾಧ್ಯಾಯರಾದ ಪಾರ್ವತಿ ವಸ್ತ್ರದ, ಮಂಜುಳಾ ಸಾಮ್ರಾಣಿ, ಎಸ್.ಎಂ. ಪತ್ತಾರ್, ಎಸ್.ಎ. ಬಾಣದ್, ಎಸ್.ಪಿ. ಗದ್ದನಕೇರಿ, ಎಸ್.ಆರ್. ಶಿರೋಳ್, ಟಿ.ವಿ. ದಾಸರ್, ಎಸ್.ಆರ್. ಗಾಳಿ ಮುಂತಾದವರು ಉಪಸ್ಥಿತರಿದ್ದರು. ಸಂಜೀವಿನಿ ಈ.ಕೂಲಗುಡಿ ಕಾರ್ಯಕ್ರಮ ನಿರೂಪಿಸಿದರೆ, ಜಯಲಕ್ಷ್ಮೀ ಬಸವರಾಜ್ ಅಣ್ಣಿಗೇರಿ ವಂದಿಸಿದರು.

## ಬಸವೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿ ಒಕ್ಕೂಟ ಉದ್ಘಾಟನೆ

# ಪರಿಶ್ರಮದೊಂದಿಗೆ ಸದ್ಗುಣಗಳನ್ನು ಬೆಳೆಸಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಗದಗ

ಸ್ಥಳೀಯ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಬಸವೇಶ್ವರ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ಬಿಎ/ಬಿಕಾಂ/ಬಿಎಸ್ಸಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು ಒಕ್ಕೂಟ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.



ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಶ್ರೀ.ಮ.ನಿ.ಜ. ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, ಮನುಷ್ಯನಿಗೆ ಮಾತು ದೇವರು ಕೊಟ್ಟ ವರ. ನಾವು ಯಾರದ್ದೇ ಜೊತೆ ಮಾತನಾಡುವಾಗ ಹಿತಮಿತವಾಗಿ ಮಾತನಾಡಬೇಕು. ಏಕೆಂದರೆ ಮಾತು ಮತ್ತು ಕೃತಿಗಳು ಮನುಷ್ಯನ ಉತ್ತಮ ವ್ಯಕ್ತಿತ್ವದ ಸಂಕೇತಗಳಾಗಿವೆ. ವಿದ್ಯಾರ್ಥಿಗಳು ಪ್ರತಿಭೆ ಮತ್ತು ಪರಿಶ್ರಮಗಳ ಮುಖೇನ ಸಾಮಾಜಿಕ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕು. ವಿದ್ಯೆಯ ಜೊತೆಗೆ ಉತ್ತಮ ಸಂಸ್ಕಾರ ಹೊಂದಬೇಕು ಅದಕ್ಕಾಗಿ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅತಿಥಿಗಳ ಅನುಭಾವದ ಮಾತುಗಳನ್ನು ಆಲಿಸಬೇಕು ಎಂದರು.

ಸಮಾರಂಭ ಉದ್ಘಾಟಿಸಿದ ವಿ.ಪ ಸದಸ್ಯ ಎಸ್.ವ್ಹಿ. ಸಂಕನೂರ ಮಾತನಾಡಿ, ಸರ್ವತೋಮುಖ ವ್ಯಕ್ತಿತ್ವ ಬೆಳೆಸುವ ಒಕ್ಕೂಟದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕು. 21ನೇ ಶತಮಾನ ಕೇವಲ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸೀಮಿತವಾಗದೆ ಜ್ಞಾನ ಮತ್ತು ಕೌಶಲ್ಯದ ಯುಗವೂ ಆಗಿದೆ. ಆದ್ದರಿಂದ ಸಮಯ ಮತ್ತು ಕರ್ತವ್ಯ ಪ್ರಜ್ಞೆ ಬೆಳೆಸಿಕೊಂಡು ಸಾಧನೆ ಮಾಡಬೇಕು ಎಂದರು.

ಅತಿಥಿಗಳಾಗಿ ಪಾಲ್ಗೊಂಡ ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯರಾದ ಶಶಿಧರ ಸಾಲಿ, ಬಲರಾಮ ಬಸವಾ ಮಾತನಾಡಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಎಸ್.ಎಸ್. ಪಟ್ಟಣಶೆಟ್ಟಿ, ಈಶಣ್ಣ ಮುನವಳ್ಳಿ ಹಾಗೂ ಬಲರಾಮ ಬಸವಾರನ್ನು ಸನ್ಮಾನಿಸಿ ಗೌರವಿಸಲಾಯಿತು. ವೇದಿಕೆಯ ಮೇಲೆ ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯರಾದ ಅಮರೇಶ ಅಂಗಡಿ, ಮೋಹನ ಅಲ್ಮೇಲಕರ ಶೇಖಣ್ಣ ಕಳಸಾಪೂರಶೆಟ್ಟರ, ವಿದ್ಯಾಧರ ದೊಡ್ಡಮನಿ, ಸಿದ್ಧಲಿಂಗಯ್ಯ ಹಿರೇಮಠ, ಲಿಂಗರಾಜ ಪಾಟೀಲ ಉಪಸ್ಥಿತರಿದ್ದರು.

ರಾಜೇಶ್ವರಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಪ್ರಾ. ಎಂ.ಎಂ. ಬುರಡಿ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಗಂಗಮ್ಮ ಹಾಗೂ ಸಂಗಡಿಗರು ವಚನ ನೃತ್ಯ ಮಾಡಿದರು. ಕೆ.ವಿ. ಬಾಗಲಕೋಟಿ ಕಾರ್ಯಕ್ರಮ ನಿರೂಪಿಸಿದರು.

# ಪ್ರತಿಭಾ ಕಾರಂಜಿಯಲ್ಲಿ ಸಾಧನೆ



■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಡಂಬಳ ಗ್ರಾಮದ ಸರಕಾರಿ ಡಿಪಿಇಪಿ ಶಾಲೆಯ ವಿದ್ಯಾರ್ಥಿಗಳು ಮುಂಡರಗಿಯಲ್ಲಿ ಜರುಗಿದ ತಾಲೂಕಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಪಾಲ್ಗೊಂಡು ವಿವಿಧ ಸ್ಪರ್ಧೆಗಳಲ್ಲಿ ಸಾಧನೆಗೈದಿದ್ದಾರೆ.

ಮಿಮಿಕ್ರಿಯಲ್ಲಿ ಸೋಹೇಬ್ ಕಾಸ್ತಾರ ಪ್ರಥಮ, ಲಘು ಸಂಗೀತ ಸ್ಪರ್ಧೆಯಲ್ಲಿ ಭಾವನಾ ಎಲಿಗಾರ ದ್ವಿತೀಯ, ಲಘು ಸಂಗೀತದಲ್ಲಿ ಪ್ರಿಯಾಂಕಾ ಚವಡಕಿ ತೃತೀಯ, ಅಭಿನಯ ಗೀತೆಯಲ್ಲಿ ನಂದಿನಿ ಹೊಸಕೇರಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಗೆ ಆಯ್ಕೆಯಾಗಿದ್ದಾರೆ.

ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಎಸ್‌ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು, ಶಾಲಾ ಶಿಕ್ಷಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

# ನಿರಾಸೆ ಮೂಡಿಸುತ್ತಿರುವ ಹಣ್ಣುಗಳ ರಾಜ

▶▶ಮೊದಲನೇ ಪುಟದಿಂದ

ತಾಲೂಕಿನಲ್ಲಿ ನದಿ, ಕೆರೆ, ಕಾಲುವೆ ಇತರೇ ನೀರಾವರಿ ಮೂಲ ಇಲ್ಲದಿದ್ದರೂ ಬೋರ್‌ವೆಲ್ ನೀರನ್ನೇ ನಂಬಿ ರೈತರು ಮಾವು, ಚಿಕ್ಕು, ಪೇರಲ, ತೆಂಗು, ನಿಂಬೆ, ಹೂವು, ಕರಿಬೇವು ಸೇರಿ ಇನ್ನಿತರ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ.


ಮಾವಿನ ಮರದಲ್ಲಿ ಹೂವು, ಹೀಚು ತುಂಬಿದ್ದನ್ನು ಕಂಡು ರೈತರು ಖುಷ್ ಆಗಿದ್ದರು. ಆದರೆ ಇದೀಗ ಹಲವಾರು ರೋಗಕ್ಕೆ ತುತ್ತಾಗಿ ಹೂವು, ಹೀಚುಗಳು ನೆಲಕ್ಕೆ ಹಾಸುತ್ತಿವೆ. ಇದೇ ವಾತಾವರಣ ಇನ್ನಷ್ಟು ದಿನ ಮುಂದುವರೆದರೆ ಸಂಪೂರ್ಣ ಹಾನಿ ಖಚಿತ ಎಂಬ ಮಾತುಗಳು ಕೇಳಿಬಂದಿದ್ದು, ಹಣ್ಣುಗಳ ರಾಜ ಮಾವು ಪ್ರಿಯರಲ್ಲಿಯೂ ನಿರಾಸೆ ಮೂಡಿಸುತ್ತಿದ್ದಾನೆ. ರೈತರ ನಿರೀಕ್ಷೆಯೂ ಹುಸಿಯಾಗುತ್ತಿದೆ.

## ಕೇಂದ್ರ ಸರ್ಕಾರದ ವಿರುದ್ಧ ಗದಗ ಜಿಲ್ಲಾ ಕಾಂಗ್ರೆಸ್, ಗದಗ ಜಿಲ್ಲಾ ಯುವ ಕಾಂಗ್ರೆಸ್‌ನಿಂದ ಪ್ರತಿಭಟನೆ

# ಕೇಂದ್ರ ಸರ್ಕಾರದಿಂದ ಪ್ರಜಾಪ್ರಭುತ್ವದ ಕಗ್ಗೊಲೆ

■ವಿಜಯಸಾಕ್ಷಿ ಸುದ್ದಿ, ಗದಗ

ಕೇಂದ್ರ ಸರ್ಕಾರದ ಜನವಿರೋಧಿ ನಡೆಯನ್ನು ಸಂಸತ್‌ನಲ್ಲಿ ಪ್ರಶ್ನಿಸುವ ವಿರೋಧ ಪಕ್ಷಗಳ ಸಂಸದರನ್ನು ಕೇಂದ್ರ ಸರ್ಕಾರವು ಅಮಾನತು ಮಾಡುವ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿರುವ ಕೇಂದ್ರ ಸರ್ಕಾರದ ನೀತಿಯನ್ನು ಖಂಡಿಸಿ ಡಿ.22ರಂದು ಗದಗ ಜಿಲ್ಲಾ ಕಾಂಗ್ರೆಸ್, ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.



ಈ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಪಕ್ಷದ ಮಾಜಿ ಹಾಗೂ ಹಾಲಿ ಶಾಸಕರು, ಪಕ್ಷದ ಜಿಲ್ಲಾ ಪಧಾದಿಕಾರಿಗಳು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು-ಪದಾದಿಕಾರಿಗಳು, ಜಿ.ಪಂ, ತಾ.ಪಂ, ಗ್ರಾ.ಪಂ, ಎಪಿಎಂಸಿ, ನಗರಸಭೆ, ಪ.ಪಂ, ಪುರಸಭೆ ಅಧ್ಯಕ್ಷರು-ಸದಸ್ಯರು, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್, ಎಸ್ಸಿ/ಎಸ್ಟಿ, ಅಲ್ಪಸಂಖ್ಯಾತರ, ವಿದ್ಯಾರ್ಥಿ ಕಾಂಗ್ರೆಸ್, ಕಾಂಗ್ರೆಸ್ ಸೇವಾದಳ, ಹಿಂದುಳಿದ ವರ್ಗ, ಸಾಮಾಜಿಕ ಜಾಲತಾಣ, ರಾಜೀವಗಾಂಧಿ ಪಂಚಾಯತ ಸಂಘಟನೆ, ಮಾಜಿ ಸೈನಿಕರ ವಿಭಾಗ, ಮೀನುಗಾರ ವಿಭಾಗ, ಕಾರ್ಮಿಕರ ವಿಭಾಗ, ಐಎನ್‌ಟಿಯುಸಿ, ಕಾನೂನು ಮತ್ತು ಮಾನವ ಹಕ್ಕು ವಿಭಾಗ, ಕಿಸಾನ್ ಮತ್ತು ಖೆತ್ ಮಜದೂರ, ಮಾಜಿ ಸೈನಿಕರ, ವೈದ್ಯರ, ವೃತ್ತಿಪರ, ಪದವೀಧರ ಹಾಗೂ ಶಿಕ್ಷಕರ ವಿಭಾಗ, ನೀತಿ ಮತ್ತು ಸಂಶೋಧನೆ ತರಬೇತಿ ವಿಭಾಗ, ವಿಕಲಚೇತನರ, ಲಿಗಲ್ ರೀಫಾರ್ಮ್ಸ್, ಐಟಿ ಮತ್ತು ಡಾಟಾ, ಮಾಧ್ಯಮ ಮತ್ತು ಸಂಪರ್ಕ ಇಲಾಖೆಗಳ ಅಧ್ಯಕ್ಷರು ಹಾಗೂ ಸದಸ್ಯರು, ಪಕ್ಷದ ಅಭಿಮಾನಿಗಳು ಪಾಲ್ಗೊಳ್ಳಬೇಕೆಂದು ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಬಿ.ಬಿ. ಅಸೂಟಿ, ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ವಿ.ಬಿ. ಸೋಮನಕಟ್ಟಿಮಠ, ಗದಗ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ ಮಂದಾಲಿ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

> ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಗದಗ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ಯುವ ಮುಖಂಡ ಕೃಷ್ಣಗೌಡ ಎಚ್.ಪಾಟೀಲರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಲಿದೆ. ಕೇಂದ್ರ ಬಿಜೆಪಿ ಸರ್ಕಾರವು ಪ್ರಜಾಪ್ರಭುತ್ವದ ಮೇಲೆ ಆಕ್ರಮಣ ಮಾಡುತ್ತಿದ್ದು, ಸಂಸತ್ತಿನ ಉಭಯ ಸದನಗಳಿಂದ 142 ಸಂಸದರನ್ನು ಅಮಾನತುಗೊಳಿಸಿದೆ. ಇದೊಂದು ಪ್ರಜಾಸತ್ತಾತ್ಮಕ ತತ್ವಗಳ ಕೊಲೆ ಎಂದು ಬಣ್ಣಿಸಲಾಗುತ್ತಿದೆ. ಈ ಘೋರ ಪ್ರಕರಣವು ನಮ್ಮ ಸಂಸತ್ತನ್ನು ಪ್ರಜಾಪ್ರಭುತ್ವದ ಸ್ಮಶಾನವನ್ನಾಗಿ ಮಾಡಿದೆ.

## ಆಲ್ ಇಂಡಿಯಾ ಎಸ್‌ಎಸ್‌ಕೆ ಕ್ರಿಕೆಟ್ ಟೂರ್ನಾಮೆಂಟ್

# ಸೋಲು-ಗೆಲುವನ್ನು ಸಮನಾಗಿ ಸ್ವೀಕರಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಕ್ರೀಡಾಪಟುಗಳು ಪಂದ್ಯಕ್ಕೆ ಮುನ್ನ ನಾವೇ ಗೆಲ್ಲುತ್ತೇವೆ ಎಂದು ಆತ್ಮವಿಶ್ವಾಸ ಹೊಂದಿರುತ್ತಾರೆ. ಆದರೆ, ಗೆಲ್ಲುವುದು ಮಾತ್ರ ಒಂದು ತಂಡವಾಗಿರುವದರಿಂದ ಕ್ರೀಡೆಯಲ್ಲಿ ಸೋಲು-ಗೆಲುವನ್ನು ಸಮನಾಗಿ ಸ್ವೀಕರಿಸಬೇಕೆಂದು ಎಸ್‌ಎಸ್‌ಕೆ ಸಮಾಜದ ಯುವ ಮುಖಂಡ ಶ್ರೀಕಾಂತ ಬಾಕಳೆ ಅಭಿಪ್ರಾಯಪಟ್ಟರು.



ಅವರು ನಗರದ ವಿಡಿಎಸ್‌ಟಿ ಮೈದಾನದಲ್ಲಿ ಶ್ರೀ ಸಹಸ್ರಾರ್ಜುನ ಕ್ರಿಕೆಟ್ ಕ್ಲಬ್, ಗದಗ ಎಸ್‌ಎಸ್‌ಕೆಸಮಾಜ, ಪಂಚಟ್ರಸ್ಟ್ ಕಮಿಟಿ, ತರುಣ ಸಂಘ ಹಾಗೂ ಮಹಿಳಾ ಮಂಡಳದ ಸಹಯೋಗದಲ್ಲಿ ನಡೆಯುತ್ತಿರುವ ಆಲ್ ಇಂಡಿಯಾ ಎಸ್‌ಎಸ್‌ಕೆ ಕ್ರಿಕೆಟ್ ಟೂರ್ನಾಮೆಂಟ್‌ನಲ್ಲಿ ವಿಜೇತ ತಂಡದ ಆಟಗಾರರಿಗೆ ಪ್ರಶಸ್ತಿ ವಿತರಿಸಿ ಮಾತನಾಡಿದರು.

ಈ ಕ್ರೀಡಾಕೂಟದಲ್ಲಿ ಧಾರವಾಡ, ಬಾಗಲಕೋಟ, ಕೊಪ್ಪಳ, ಹರಿಹರ, ಹುಬ್ಬಳ್ಳಿ, ದಾವಣಗೇರಿ, ಸಿಂದನೂರ ಸೇರಿದಂತೆ ಪುಣೆ, ಸೋಲಾಪೂರ, ಚೆನ್ನೈನಿಂದ ಎಸ್‌ಎಸ್‌ಕೆ ಸಮಾಜದ 24 ಕ್ರಿಕೆಟ್ ತಂಡಗಳು ಪಾಲ್ಗೊಂಡಿರುವುದು ಹೆಮ್ಮೆ ತಂದಿದೆ ಎಂದು ಹೇಳಿದರು.

ಸಿಂದನೂರ ಎಸ್‌ಎಸ್‌ಕೆ ತಂಡದ ನಾಯಕ ಹಾಗೂ ಚಲನಚಿತ್ರ ನಟ ಶಶಿ ದಾನಿ ಮಾತನಾಡಿ, ಇಂತಹ ಚಟುವಟಿಕೆಗಳಿಂದ ಸಮಾಜ ಸಂಘಟನೆಗೆ ಶಕ್ತಿ ಬರುತ್ತದೆ. ಸಮಾಜದ ಯುವಕರು ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಸಹಕಾರಿಯಾಗುತ್ತದೆ. ಪ್ರತಿವರ್ಷ ಇಂತಹ ಕ್ರೀಡಾಕೂಟವನ್ನು ಆಯೋಜಿಸಬೇಕೆಂದು ಸಲಹೆ ನೀಡಿದರು.

ಸಿಂದನೂರ ಎಸ್‌ಎಸ್‌ಕೆ ತಂಡ ಹಾಗೂ ಧಾರವಾಡ ಎಸ್‌ಎಸ್‌ಕೆ ಕ್ರೇಜಿಸ್ಟಾರ್ ತಂಡದ ನಡುವೆ ನಡೆದ ಪಂದ್ಯಾವಳಿಯಲ್ಲಿ ಸಿಂದನೂರ ಎಸ್‌ಎಸ್‌ಕೆ ಕ್ರಿಕೆಟ್ ತಂಡದ ಆಟಗಾರ ಗಗನ ಕಾಟವಾ ಪಂದ್ಯಶ್ರೇಷ್ಠ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಈ ಸಂದರ್ಭದಲ್ಲಿ ಕ್ರಿಕೆಟ್ ಟೂರ್ನಾಮೆಂಟ್ ಪ್ರಾಯೋಜಕರಾದ ಗದಗ ಜಿಲ್ಲಾ ಸಹಸ್ರಾರ್ಜುನ ಸೇವಾ ಟ್ರಸ್ಟ್ ಅಧ್ಯಕ್ಷ ವಿನೋದ ಬಾಂಡಗೆ, ಉದ್ಯಮಿ ರಾಘವೇಂದ್ರ ಪವಾರ, ಸಂಘಟಕರಾದ ಶ್ರೀನಿವಾಸ ಬಾಂಡಗೆ, ದೀಪಕ ಮೇರವಾಡೆ, ವೈಭವ ಬದಿ, ಉಮೇಶ ಪವಾರ, ಅಮೃತ ಹಬೀಬ, ವೀಕ್ಷಕ ವಿವರಣೆಕಾರ ಸೋಮು ಅಂಗಡಿ, ಸ್ಕೋರರ್ ರಾಜು ಭಜಂತ್ರಿ, ನಿರ್ಣಾಯಕ ಕಿರಣ ಗೌಡ್ರ, ಮಲ್ಲೇಶ ವಾಲಿಕಾರ ಮುಂತಾದವರು ಇದ್ದರು.

# ನೀರಿನ ಕರ ಭರಣ ಮಾಡಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಕುಡಿವ ನೀರಿನ ಕರ ಸಾಕಷ್ಟು ಬಾಕಿ ಉಳಿದಿದ್ದು, ನಿರ್ವಹಣೆ ಕಾರ್ಯಕ್ಕೆ ತೊಂದರೆಯಾಗಿದೆ. ಈ ಕಾರಣಕ್ಕಾಗಿ, ನೀರಿನ ಕರ ಬಾಕಿ ಉಳಿಸಿಕೊಂಡ ಮಾಲೀಕರ ನಳಗಳನ್ನು ಬಂದ್ ಮಾಡುವ ಕಾರ್ಯವನ್ನು ನಗರಸಭೆ ಸಿಬ್ಬಂದಿ ಮುಂದುವರೆಸಿದ್ದಾರೆ.

ವಸೂಲಿ ಕಾರ್ಯದ ಮುಂದಿನ ಹಂತವಾಗಿ ಮೂರು ವರ್ಷಕ್ಕೂ ಅಧಿಕ ಬಾಕಿ ಉಳಿಸಿಕೊಂಡಿರುವವರ ಹೆಸರುಗಳನ್ನು ಸುದ್ದಿ ಮಾಧ್ಯಮಗಳಲ್ಲಿ ಪ್ರಕಟಿಸುವ ಕುರಿತು ಕ್ರಮ ಕೈಗೊಳ್ಳಲಾಗುತ್ತಿದ್ದು, ಕಾರಣ ನಾಗರಿಕರು ತಮ್ಮ ತಮ್ಮ ನಳಗಳ ನೀರಿನ ಕರವನ್ನು ಭರಣ ಮಾಡುವಂತೆ ನಗರಸಭೆ ಅಧಿಕಾರಿಗಳು ಸೂಚಿಸಿದ್ದಾರೆ.



# ಕ್ಲಾಥ್ ಮರ್ಚಂಟ್ಸ್ ಅಸೋಶಿಯೇಷನ್ ಪದಾಧಿಕಾರಿಗಳ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ



ಗದಗ ಜಿಲ್ಲಾ ಕ್ಲಾಥ್ ಮರ್ಚಂಟ್ಸ್ ಅಸೋಶಿಯೇಷನ್‌ನ ನೂತನ ಅಧ್ಯಕ್ಷರಾಗಿ ನಗರದ ಗಣ್ಯ ವರ್ತಕರಾದ ಸುರೇಶ ಬನ್ಸಾಲಿ, ಕಾರ್ಯದರ್ಶಿಯಾಗಿ ಹೀರಾಚಂದ ಸೇಮಲಾನಿ ಹಾಗೂ ಖಜಾಂಚಿಯಾಗಿ ಮಹಾವೀರ ಸೋಳಂಕಿ ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಪೃಥ್ವಿರಾಜ ಬನ್ಸಾಲಿ, ಮದನಲಾಲ ಲುಂಕಡ, ಪ್ರವೀಣ ಸಂಕಲೇಚ, ಸ್ವರೂಪ ದೋಖಾ, ಧೀರಜ್ ಬಾಫಣಾ, ದೇವರಾಜ ಬನ್ಸಾಲಿ, ರಾಜೇಂದ್ರ ಸಿಂಘವಿ, ಮೋಹನ ಪವಾರ, ಮಹಾವೀರ ಸಂಕಲೇಚ, ರಾಜೇಂದ್ರ ಪಾಲರೇಚಾ ಆಯ್ಕೆಯಾಗಿದ್ದಾರೆ.

ಸಲಹಾ ಮಂಡಳಿಯ ಸದಸ್ಯರಾಗಿ ಸುರೇಶ ಓಸವಾಲ, ಹರೀಶ ಶಹಾ ಹಾಗೂ ಸುರೇಶ ಕೋಠಾರಿ ಆಯ್ಕೆಯಾಗಿದ್ದಾರೆ. ಗದಗ ಸಿದ್ಧ ಉಡುಪು ತಯಾರಕರ ಹಾಗೂ ವಿತರಕರ ಅಸೋಶಿಯೇಷನ್ ಉಪಾಧ್ಯಕ್ಷರೂ ಆಗಿರುವ ಸುರೇಶ ಬನ್ಸಾಲಿ ಅವರು ತಮ್ಮ ತಂಡದ ಅಧಿಕಾರದ ಅವಧಿಯಲ್ಲಿ ಉತ್ತಮ ಕಾರ್ಯ ಮಾಡುವ ಭರವಸೆ ನೀಡಿದರು.

# ಶ್ರೀ ವೀರಭದ್ರೇಶ್ವರ ದೇವರ ಕಾರ್ತಿಕೋತ್ಸವ ಡಿ.26ಕ್ಕೆ

■ವಿಜಯಸಾಕ್ಷಿ ಸುದ್ದಿ, ರೋಣ

ಇಲ್ಲಿನ ಡ.ಸ. ಹಡಗಲಿ ಗ್ರಾಮದ ಶ್ರೀ ವೀರಭದ್ರೇಶ್ವರ ದೇವರ ಕಾರ್ತಿಕೋತ್ಸವ ಡಿ.26ರಂದು ನೆರವೇರಲಿದೆ. ಕಾರ್ತಿಕೋತ್ಸವದ ನಿಮಿತ್ತ ಶ್ರೀದೇವರಿಗೆ ಮಹಾರುದ್ರಾಭಿಷೇಕ, ಕುಂಭಮೇಳ, ಕಲಾ ಪುರವಂತರ ತಂಡದಿಂದ ನಂದಿಕೋಲ ಕಾರ್ಯಕ್ರಮದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಲಿದ್ದು, ಮಧ್ಯಾಹ್ನ 1 ಗಂಟೆಗೆ ಮಹಾಪ್ರಸಾದ ಜರುಗಲಿದೆ.

ಸಾಯಂಕಾಲ 7 ಗಂಟೆಗೆ ಪೂಜ್ಯ ಶ್ರೀ ಲಿಂಗೈಕ್ಯ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳರವರ ಶಿಷ್ಯರಾದ, ಶ್ರೀ ವಿರೇಶ್ವರ ಪುಣ್ಯಾಶ್ರಮದ ಪೂಜ್ಯ ಡಾ. ಕಲ್ಲಯ್ಯಜ್ಜನವರಿಗೆ ಗ್ರಾಮದ ಸಕಲ ಸದ್ಭಕ್ತರಿಂದ ತುಲಾಭಾರ ಕಾರ್ಯಕ್ರಮ ನೆರವೇರಿಸಲಾಗುವುದು.

ವೀರಭದ್ರೇಶ್ವರ ವ್ಯವಸ್ಥಾಪಕ ಮಂಡಳಿ, ಶ್ರೀ ಬಸವೇಶ್ವರ ಜಾತ್ರಾ ಕಮಿಟಿ, ಶ್ರೀ ಬಸವೇಶ್ವರ ಭಜನಾ ಸಂಘ, ಶ್ರೀ ಸಂಗಮೇಶ್ವರ ಭಜನಾ ಸಂಘ, ಶ್ರೀ ದುರ್ಗಾದೇವಿ ಭಜನಾ ಸಂಘ, ಗ್ರಾಮದ ಎಲ್ಲ ಸದ್ಭಕ್ತರು ಈ ಕಾರ್ತಿಕೋತ್ಸವ ಹಾಗೂ ತುಲಾಭಾರ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಪತ್ರಿಕಾ ಪ್ರಕಟಣೆಯ ಮೂಲಕ ಗ್ರಾಮದ ಹಿರಿಯರು ತಿಳಿಸಿದ್ದಾರೆ.

## ಶ್ರೀ ರಾಚೋಟಿ ವೀರಭದ್ರೇಶ್ವರ ಕಾರ್ತಿಕೋತ್ಸವ ಡಿ.26ಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಒಕ್ಕಲಗೇರಿ ಓಣಿಯ ಶ್ರೀ ರಾಚೋಟಿ ವೀರಭದ್ರೇಶ್ವರ ಹಾಗೂ ಭದ್ರಕಾಳಿ ಮಾತೆಯ ದೀಪೋತ್ಸವ ಕಾರ್ಯಕ್ರಮ ಡಿ.26ರಂದು ನೆರವೇರಲಿದೆ. ಬೆಳಿಗ್ಗೆ 7.30ಕ್ಕೆ ರುದ್ರಾಭಿಷೇಕ, ಕ್ಷೀರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಧ್ಯಾಹ್ನ 12.30ಕ್ಕೆ ಮಹಾ ಅನ್ನಸಂತರ್ಪಣೆ, ಸಂಜೆ 7 ಗಂಟೆಗೆ ಕಾರ್ತಿಕೋತ್ಸವ, ಪಲ್ಲಕ್ಕಿ ಮೆರವಣಿಗೆ, ಅಗ್ನಿ ಹಾಯುವದು, ಪ್ರಸಾದ ವಿತರಣೆ ಕಾರ್ಯಕ್ರಮಗಳು ಜರುಗಲಿದ್ದು, ಭಕ್ತಾದಿಗಳು ಆಗಮಿಸಿ ದೇವರ ದರ್ಶನ, ಆಶೀರ್ವಾದವನ್ನು ಪಡೆದುಕೊಳ್ಳಬೇಕೆಂದು ಟ್ರಸ್ಟ್ ಕಮಿಟಿಯ ಚೇರಮನ್ ಎಸ್.ಎ. ಮೊರಬದ ವಿನಂತಿಸಿದ್ದಾರೆ.

## ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

2023–24ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿಎಚ್‌ಡಿ ಅಧ್ಯಯನ ಪ್ರಾರಂಭಿಸಿರುವ (ದಿ.30–1–2023 ಮತ್ತು ಅದರ ನಂತರ ಪ್ರಥಮ ವರ್ಷದ ಪಿಎಚ್‌ಡಿ ಪ್ರಾರಂಭಿಸಿರಬೇಕು) ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ– I, II (ಎ), III (ಎ), III ( ಬಿ) ಗೆ ಸೇರಿದ ಅರ್ಹ ಅಭ್ಯರ್ಥಿಗಳಿಂದ ಮಾಸಿಕ ವ್ಯಾಸಂಗ ವೇತನ/ ಫೆಲೋಶಿಫ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2023–24ನೇ ಸಾಲಿನಲ್ಲಿ ಕರ್ನಾಟಕದ ಶಾಸನಬದ್ಧ ವಿಶ್ವ ವಿದ್ಯಾಲಯಗಳಲ್ಲಿ/ ಅಧೀನಕ್ಕೆ ಒಳಪಡುವ ಸಂಸ್ಥೆಗಳಲ್ಲಿ ಪ್ರಥಮ ವರ್ಷದ ಪಿಎಚ್‌ಡಿ ಅಧ್ಯಯನ ಮಾಡುತ್ತಿರುವ ಹೊಸ ಅಭ್ಯರ್ಥಿಗಳು ಮಾತ್ರ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜನೆವರಿ 10 ಆಗಿದ್ದು, ಹೆಚ್ಚಿನ ವಿವರಗಳು ಇಲಾಖಾ ವೆಬ್ ಸೈಟ್ https://bcwd.karnataka.gov.in ನಲ್ಲಿ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಗದಗ ಇವರನ್ನು ಸಂಪರ್ಕಿಸಬಹುದಾಗಿದೆ.

### ಅಗಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕನ್ನಡಡದ ಕಂಪು ಪಸರಿಸಿದ 'ಕನ್ನಡ ಹಬ್ಬ'

## ಮಾತೃಭಾಷೆ ಕನ್ನಡದ ನಿರ್ಲಕ್ಷ್ಯ ಸಲ್ಲದು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕನ್ನಡಿಗರಾದ ನಾವೇ ಮಾತೃಭಾಷೆ ಕನ್ನಡದ ಬಗ್ಗೆ ಕೀಳರಿಮೆ ತೋರದೇ ಪ್ರೀತಿ, ವಿಶ್ವಾಸ, ಅಭಿಮಾನ, ಸ್ವಾಭಿಮಾನ, ಜ್ಞಾನ ಬೆಳೆಸಿಕೊಳ್ಳಬೇಕು ಎಂದು ಸಾಹಿತಿ ಪ್ರೊ. ಅನಿಲ ವೈದ್ಯ ಹೇಳಿದರು.

ಅವರು ಗುರುವಾರ ಪಟ್ಟಣದ ಶ್ರೀಮತಿ ಕಮಲಾ–ಶ್ರೀ ವೆಂಕಪ್ಪ ಅಗಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ಕನ್ನಡ ಹಬ್ಬ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಸೇರಿ ಇತರೇ ಭಾಷೆಗಳ ಜ್ಞಾನ ಅಗತ್ಯ. ಹಾಗೆಂದು ಕನ್ನಡದ ನಿರ್ಲಕ್ಷ ಸಲ್ಲದು. ವಿದ್ಯಾರ್ಥಿಗಳು ಕಲಿಕಾ ಹಂತದಲ್ಲಿ ಮನಸ್ಸಿನ ನಿಗ್ರಹ ಮಾಡಿ ಸಮರ್ಪಣಾ ಭಾವದಿಂದ, ಶ್ರದ್ಧೆಯಿಂದ ಸತತಾಭ್ಯಾಸದಲ್ಲಿ ತೊಡಗಿಸಿಕೊಳ್ಳಬೇಕು. ತಂದೆ–ತಾಯಿಗಳು ಮಕ್ಕಳ ಬಗ್ಗೆ ಅಪಾರವಾದ ನಂಬಿಕೆ, ವಿಶ್ವಾಸ, ಭರವಸೆ, ಕನಸು ಕಟ್ಟಿಕೊಂಡಿರುತ್ತಾರೆ. ಅದಕ್ಕೆ ಪೂರಕವಾಗಿ ನಡೆದು ಹೆತ್ತವರ, ಶಿಕ್ಷಕರ, ಕಾಲೇಜಿನ ಕೀರ್ತಿ ಹೆಚ್ಚಿಸುವ ಕೆಲಸ ಮಾಡಿ ಎಂದರು.

ಕು.ಅನುಷಾ ಹಿರೇಮಠ ಕನ್ನಡ ಭಾಷೆ, ನೆಲ–ಜಲ, ಕನ್ನಡದ ಸಂಸ್ಕೃತಿಯ ಬಗ್ಗೆ ಮಾತನಾಡಿ ಎಲ್ಲರ ಮೆಚ್ಚುಗೆ ಪಡೆದಳು. ಪ್ರಾಚಾರ್ಯ ಡಾ. ಪರಶುರಾಮ ಬಾರ್ಕಿ, ಡಾ. ಎನ್.ಹಯವದನ, ಪ್ರೊ.ಸೋಮಶೇಖರ ಕೆರಿಮನಿ, ಪ್ರೊ.ಎಸ್.ವಿ. ಮಹಾಪುರುಷ, ಪ್ರೊ.ಮಾಲತೇಶ ಸೂರಣಗಿ, ಡಾ. ರಾಜಶೇಖರ ಮೂಲಿಮನಿ, ಬಿ.ಎಸ್. ಬಾಳೇಶ್ವರಮಠ ಸೇರಿ ಕಾಲೇಜಿನ ಉಪನ್ಯಾಸಕ ವರ್ಗದವರಿದ್ದರು. ವಿದ್ಯಾರ್ಥಿನಿ ಅನ್ನಪೂರ್ಣ ಹಿರೇಮಠ, ರಕ್ಷಿತಾ ಕುಂದಗೋಳ, ಮೇಘಾ ಪಶಟ್ಟಿ, ದಿವ್ಯಾ.ಜಿ. ನಿರ್ವಹಿಸಿದರು.



ಕಾಲೇಜಿನ ಕನ್ನಡ ಸಂಘ, ಎನ್‌ಎಸ್‌ಎಸ್ ಘಟಕದ ಸಹಯೋಗದಲ್ಲಿ ಕಾಲೇಜಿನ ಎಲ್ಲ ವಿಭಾಗದ ವತಿಯಿಂದ ಕೈಗೊಂಡ ಅಗಡಿ ಕನ್ನಡ ಹಬ್ಬ ವಿದ್ಯಾರ್ಥಿಗಳಲ್ಲಿ ಸಂಭ್ರಮ ಮೂಡಿಸಿತು. ಕಾಲೇಜಿನೆಲ್ಲೆಡೆ ಕನ್ನಡದ ಬಾವುಟಗಳು ರಾರಾಜಿಸಿ ಕನ್ನಡ ಕಂಪು ಮೇಳೈಸಿತ್ತು. ಕನ್ನಡ ಹಬ್ಬದ ನಿಮಿತ್ತ ಕಳೆದ ಒಂದು ವಾರದಿಂದ ವಿವಿಧ ವಿಭಾಗಗಳ ವಿದ್ಯಾರ್ಥಿಗಳಿಂದ ಕನ್ನಡ ಕುರಿತ ಪ್ರಬಂಧ, ಚರ್ಚಾ ಸ್ಪರ್ಧೆ, ನೃತ್ಯ, ಹಾಡು, ಸಂಗೀತ, ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿತ್ತು. ಗುರುವಾರ ನಡೆದ ಕನ್ನಡ ಹಬ್ಬ ಕಾರ್ಯಕ್ರಮದಲ್ಲಿ ವಿಜೇತ ವಿದ್ಯಾರ್ಥಿಗಳು ಪ್ರಶಸ್ತಿ ನೀಡಿ ಗೌರವಿಸಲಾಯಿತು.

> ಪ್ರಸ್ತುತ ದಿನಮಾನಗಳಲ್ಲಿ ತಂತ್ರಜ್ಞಾನದಲ್ಲಿ ಕನ್ನಡ ಬಳಕೆಯಾಗಲು ಕನ್ನಡದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಸೇವೆ ಶ್ಲಾಘನೀಯ. ನಮ್ಮ ಕಾಲೇಜಿನ ವಿದ್ಯಾರ್ಥಿಗಳು ರಾಜ್ಯೋತ್ಸವದ ನಿಮಿತ್ತ ವಿಶೇಷ ಕಾರ್ಯಕ್ರಮಗಳ ಮೂಲಕ ಕಾಲೇಜಿನಲ್ಲಿ ಕನ್ನಡದ ಹಬ್ಬ ಆಚರಿಸಿದ್ದು ಮತ್ತು ಕನ್ನಡದ ಭಾಷೆಯ ಬಗ್ಗೆ ವಿದ್ಯಾರ್ಥಿಗಳಲ್ಲಿನ ಪ್ರೇಮ, ಅಭಿಮಾನ, ಉತ್ಸಾಹ ಖುಷಿ ನೀಡಿದೆ. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಸೇರಿ ಇತರೇ ಭಾಷೆಗಳ ಜ್ಞಾನ ಅವಶ್ಯವಾಗಿದ್ದರೂ ತಾಯಿ ಭಾಷೆ ಕನ್ನಡದ ಅಭಿಮಾನ ಅತ್ಯಗತ್ಯ. ಅದಕ್ಕಾಗಿ ಪ್ರತಿವರ್ಷ ಕಾಲೇಜಿನಲ್ಲಿ ರಾಜ್ಯೋತ್ಸವ ಅಂಗವಾಗಿ 'ಕನ್ನಡ ಹಬ್ಬ' ಆಚರಿಸಲಾಗುತ್ತದೆ.
>
> – ಡಾ. ಪರಶುರಾಮ ಬಾರ್ಕಿ.
> ಪ್ರಾಚಾರ್ಯರು.

### ಸೈಕಲ್‌ನಲ್ಲಿಯೇ 434 ದಿನಗಳ ಪ್ರಯಾಣ ಪೂರೈಸಿದ ರಾಬಿನ್ ಸಿಂಗ್

## ಪರಿಸರ ಜಾಗೃತಿಗಾಗಿ ಸೈಕಲ್ ಏರಿದ ಯುವಕ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪರಿಸರ ಜಾಗೃತಿಗಾಗಿ ಕಳೆದ ವರ್ಷ ಅಕ್ಟೋಬರ್ 2ರಂದು ಕನ್ಯಾಕುಮಾರಿಯಿಂದ ಸೈಕಲ್ ಏರಿದ ಉತ್ತರ ಪ್ರದೇಶದ ಇಟಾವಾ ಭಾಗದ ಪದವೀಧರ ರೈತ ರಾಬಿನ್ ಸಿಂಗ್(37) 22 ರಾಜ್ಯಗಳನ್ನು ದಾಟಿ 26 ಸಾವಿರ ಕಿ.ಮೀ ಕ್ರಮಿಸಿ, ಲಕ್ಷ್ಮೇಶ್ವರಕ್ಕೆ ಆಗಮಿಸಿದಾಗ ತಹಸೀಲ್ದಾರ ವಾಸುದೇವ ಸ್ವಾಮಿ, ಸಿಬ್ಬಂದಿಗಳು, ಸಾರ್ವಜನಿಕರು ಸ್ವಾಗತಿಸಿದರು.

ರಾಬಿನ್‌ಸಿಂಗ್ ಪ್ರವಾಸೋದ್ಯಮ ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಪ್ರತಿದಿನ 110ರಿಂದ 120 ಕಿ.ಮೀನಂತೆ 434 ದಿನಗಳ ಪ್ರಯಾಣ ಪೂರೈಸಿದ್ದಾರೆ. ಮಾರ್ಗದ ನಡುವೆ ಸ್ವಚ್ಛ ಪರಿಸರ, ಶುದ್ಧ ಗಾಳಿ ಹಾಗೂ ಶುದ್ಧ ಆಹಾರದ ಬಗ್ಗೆ 400 ಶಾಲಾ–ಕಾಲೇಜು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಾ, ಜಾಗೃತಿ ಮೂಡಿಸುತ್ತಾ ಪಯಣಸಿದ್ದಾರೆ.

'ಗ್ರೀನ್–ಇಂಡಿಂಯಾ ಮೂವ್ಮೆಂಟ್' ಹೆಸರಿನಲ್ಲಿ ಪ್ರಯಾಣ ಬೆಳೆಸಿರುವ ಇವರು, ಪರಿಸರ ಸಂರಕ್ಷಣೆಯ ಜವಾಬ್ದಾರಿ ಕೇವಲ ಸರಕಾರದ್ದಲ್ಲ. ಅದು ಪ್ರತಿ ಪ್ರಜೆಯದ್ದಾಗಿದೆ. ಪ್ಲಾಸ್ಟಿಕ್ ಬಾಟಲಿಯಲ್ಲಿ ನೀರು ಕುಡಿಯುವದನ್ನು ಬಿಡಬೇಕು ಎಂಬ ಸಲಹೆ ಅವರದು.



ಅಂದಾಜು 40 ಸಾವಿರ ಕಿ.ಮೀ ದೂರದ, ಒಟ್ಟು 700 ದಿನಗಳ ಈ ಜಾಗೃತಿ ಯಾತ್ರೆ ಮಾರ್ಚ್ 11ರಂದು ಮಧ್ಯಪ್ರದೇಶದ ಭೂಪಾಲ್‌ದಲ್ಲಿ ಸಂಪನ್ನಗೊಳ್ಳಲಿದೆ. ಇವರಿಗೆ ಪತ್ನಿ, 5 ವರ್ಷದ ಮಗ, ಒಂದೂವರೆ ವರ್ಷದ ಮಗಳಿದ್ದಾಳೆ.

ಅವರು ಬುಧವಾರ ಸಂಜೆ ಲಕ್ಷ್ಮೇಶ್ವರಕ್ಕೆ ಆಗಮಿಸಿದಾಗ ತಹಸೀಲ್ದಾರ ವಾಸುದೇವ ಸ್ವಾಮಿ, ಗ್ರೇಡ್–2 ತಹಸೀಲ್ದಾರ ಮಂಜುನಾಥ ಅಮಾಸಿ, ಕಂದಾಯ ನಿರೀಕ್ಷಕ ಬಿ.ಎಂ. ಕಾತ್ರಾಳ, ಶಿರಸ್ತೇದಾರ ರೇಣುಕಾ ಹರಿಜನ, ಅಶ್ವಥ್ ಹೆಗಡೆ, ಸೊನ್ನದ ಸೇರಿದಂತೆ ಅನೇಕರು ಸ್ವಾಗತಿಸಿದರು.

### 'ಚಿಲಿಪಿಲಿ' ಶಾಲಾ ಮಕ್ಕಳ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದ ನಾಗಯ್ಯ ಕಾಡದೇವರಮಠ

## ಕ್ರೀಡೆಯಿಂದ ಸ್ಪರ್ಧಾ ಮನೋಭಾವನೆ ವೃದ್ಧಿ



■ವಿಜಯಸಾಕ್ಷಿ ಸುದ್ದಿ, ಧಾರವಾಡ

ಮಕ್ಕಳಿಗೆ ಕ್ರೀಡಾ ಚಟುವಟಿಕೆಯು ಕಲಿಕೆಯ ಒಂದು ಆಯಾಮ ಎಂಬುದನ್ನು ಪಾಲಕರು ತಿಳಿದುಕೊಳ್ಳಬೇಕು. ಬಹಳಷ್ಟು ಪಾಲಕರು ತಮ್ಮ ಮಕ್ಕಳು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಕಲಿಕೆಯಲ್ಲಿ ಹಿಂದೆ ಉಳಿಯುತ್ತಾರೆ ಎಂಬ ಭಾವನೆಯಿಂದ ತಮ್ಮ ಮಕ್ಕಳಿಗೆ ಪ್ರೋತ್ಸಾಹ ನೀಡದಿರುವುದು ತಪ್ಪು ಎಂದು ಧಾರವಾಡ ಶಹರದ ಪೊಲೀಸ್ ಇನ್ಸ್‌ಪೆಕ್ಟರ್ ನಾಗಯ್ಯ ಕಾಡದೇವರಮಠ ನುಡಿದರು.

ಅವರು ಚಿಲಿಪಿಲಿ ಪೂರ್ವ ಪ್ರಾಥಮಿಕ ಹಾಗೂ ಗುಬ್ಬಚ್ಚಿ ಗೂಡು ಹೈಸ್ಕೂಲ್ ಮಕ್ಕಳ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದರು.

ಕ್ರೀಡೆಯು ಮಕ್ಕಳಲ್ಲಿ ಸ್ಪರ್ಧಾ ಮನೋಭಾವನೆ ಬೆಳೆಸುತ್ತದೆ. ಎಲ್ಲವನ್ನು ಸಮಚಿತ್ತದಿಂದ ಸ್ವೀಕರಿಸುವ ಗುಣ ಬರುತ್ತದೆ. ಎಲ್ಲರೊಟ್ಟಿಗೆ ಬೆರೆಯುವ ಮತ್ತು ಏಕಾಗ್ರತೆಯನ್ನು ಹೊಂದುವುದಕ್ಕೆ ಸಹಕಾರಿಂಯಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುತ್ತದೆ. ದೈಹಿಕವಾಗಿ ಸದೃಢವಾದರೆ ಮಾನಸಿಕವಾಗಿ ಸದೃಢವಾಗಿರಲು ಸಾಧ್ಯ. ಪಾಲಕರು ಇದನ್ನು ಸರಿಯಾಗಿ ತಿಳಿದುಕೊಂಡು ಯಾವುದಾದರು ಒಂದು ಕ್ರೀಡೆಯಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಬೇಕಾಗಿದ್ದು ಅವಶ್ಯ ಎಂದರು.

ಅತಿಥಿಯಾಗಿ ಭಾಗವಹಿಸಿದ ಜೆಎಸ್‌ಎಸ್ ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾಧ್ಯಾಯ ಮಾತನಾಡಿ, ಪ್ರತಿಯೊಂದು ಶಾಲೆಯಲ್ಲಿ ಕ್ರೀಡೆಗೆ ಮಹತ್ವ ನೀಡಬೇಕು.

ಯಾವ ಮಗು ಯಾವ ಕ್ರೀಡೆಯಲ್ಲಿ ಆಸಕ್ತಿ ಇದೆ ಎಂಬುದನ್ನು ದೈಹಿಕ ಶಿಕ್ಷಕರು ಗುರುತಿಸಿ, ಅದರಲ್ಲಿ ಆ ಮಗುವಿಗೆ ತರಬೇತಿ ಮತ್ತು ಮಾರ್ಗದರ್ಶನ ಮಾಡಬೇಕು. ಮಕ್ಕಳು ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸುವುದರಿಂದ ಸಹಜವಾಗಿ ಮೆದುಳು ಚುರುಕುಕೊಳ್ಳುತ್ತದೆ. ಇದರಿಂದ ಓದಿನಲ್ಲಿ ಹೆಚ್ಚಿನ ಸಾಧನೆ ಮಾಡಲು ಸಾಧ್ಯ ಎಂದರು.

ಚಿಲಿಪಿಲಿ ಸಂಸ್ಥೆಯ ಅಧ್ಯಕ್ಷ ಶಂಕರ ಹಲಗತ್ತಿ ಅಧ್ಯಕ್ಷತೆ ವಹಿಸಿದರು. ದೈಹಿಕ ಶಿಕ್ಷಕ ಸಿಕಂದರ ದಂಡಿನ ಕ್ರೀಡಾ ಸ್ಪರ್ಧೆಯನ್ನು ನಡೆಸಿಕೊಟ್ಟರು. ವಿಜಯಲಕ್ಷ್ಮೀ ಸುಭಾಂಜಿ ಸ್ವಾಗತಿಸಿದರು. ಶಾಲೆಯ ಪ್ರಧಾನ ಗುರುಮಾತೆ ಲಕ್ಷ್ಮೀ ಜಾಧವ ಕಾರ್ಯಕ್ರಮ ನಡೆಸಿಕೊಟ್ಟರು.

ಭಾರತಿ ಸಾಬಳೆ, ಲಕ್ಷ್ಮಣ ತಿಕ್ಕುಂಡಿ, ಶಂಕರ ರಾಚಯ್ಯನವರ, ಶುಭಾ ದೊಡಮನಿ, ಲತಾ ಹನಮನಾಳ, ಪ್ರಗತಿ ಸಾಬಳೆ, ಸವಿತಾ ದೇಸಾಯಿ, ದಿಲಶಾದ ಕಾಲೆಮಾದರ, ರೇಷ್ಮಾ ಮುಲ್ಲಾನವರ, ವಾಹಿದಾ ತೊರೆವಾಲೆ ಸುಮಿತ್ರಾ ಪತ್ತಾರ, ವಿವಿಧ ಕ್ರೀಡಾ ಸ್ಪರ್ಧೆಗಳನ್ನು ನಡೆಸಿಕೊಟ್ಟರು.

### ಕನಕದಾಸರ 536ನೇ ಜಯಂತ್ಯುತ್ಸವ ಆಮಂತ್ರಣ ಪತ್ರಿಕೆ ಬಿಡುಗಡೆ

## ಉತ್ಸವ ಆಚರಣೆಗೆ ಸಕಲ ಸಿದ್ಧತೆ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ರೋಣ ಹಾಗೂ ಗಜೇಂದ್ರಗಡ ತಾಲೂಕು ಮಟ್ಟದಲ್ಲಿ ದಾಸಶ್ರೇಷ್ಠ ಭಕ್ತ ಕನಕದಾಸರ 536ನೇ ಜಯಂತ್ಯುತ್ಸವವನ್ನು ಅದ್ಧೂರಿಯಾಗಿ ಆಚರಿಸಲು ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ಹಾಲುಮತ ಸಮಾಜದ ಹಿರಿಯ ಮುಖಂಡ ವಿ.ಆರ್. ಗುಡಿಸಾಗರ ಹೇಳಿದರು.

ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಗುರುವಾರ ಗಜೇಂದ್ರಗಡ, ರೋಣ ತಾಲೂಕಾ ಹಾಲುಮತ ಸಮಾಜದಿಂದ ಡಿ.25ರಂದು ಇಲ್ಲಿನ ಬಾಬು ಜಗಜೀವನರಾಮ ಭವನದಲ್ಲಿ ನಡೆಯುವ ಕನಕದಾಸರ 536ನೇ ಜಯಂತ್ಯುತ್ಸವ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪಟ್ಟಣದಲ್ಲಿ ಡಿ.25ರಂದು ನಡೆಯುವ ಕನಕದಾಸರ 536ನೇ ಜಯಂತ್ಯುತ್ಸವದ ನಿಮಿತ್ತ ಕನಕದಾಸರ ಭಾವಚಿತ್ರ ಮೆರವಣಿಗೆಯು ಸ್ಥಳೀಯ ಗೌಳಿಗಲ್ಲಿಯ ಗರಡಿಮನಿ ಮುಂಭಾಗದಿಂದ ಆರಂಭವಾಗಲಿದ್ದು, ಮೆರವಣಿಗೆ ಯಲ್ಲಿ 500 ಕುಂಭ ಹೊತ್ತ ಮಹಿಳೆಯರು ಹಾಗೂ ರಾಜ್ಯದ ವಿವಿಧ ಭಾಗಗಳ ಡೊಳ್ಳು ಕುಣಿತ ತಂಡಗಳು ಪಾಲ್ಗೊಳ್ಳಲಿವೆ ಎಂದರು.

ವಕೀಲ ಕೆ.ಎಸ್. ಕೊಡತಗೇರಿ ಮಾತನಾಡಿ, ಧಾರವಾಡದ ಜ.ರೇವಣಶಿದ್ದೇಶ್ವರ ಮಠದ ಬಸವರಾಜ ದೇವರು, ಬಾದಿಮನಾಳ ಕನಕ ಗುರುಪೀಠದ ಶಿವಸಿದ್ದೇಶ್ವರ ಸ್ವಾಮೀಜಿ, ನಿಡಗುಂದಿ ಧರ್ಮರ ಮಠದ ಷಣ್ಮುಖಪ್ಪಜ್ಜ ಧರ್ಮರ ಸಾನ್ನಿಧ್ಯ ವಹಿಸಲಿದ್ದು, ರೋಣ ಶಾಸಕ ಜಿ.ಎಸ್. ಪಾಟೀಲರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಕನಕದಾಸರ ಭಾವಚಿತ್ರಕ್ಕೆ ರೋಣ ಪುರಸಭೆ ಉಪಾಧ್ಯಕ್ಷ ಮಿಥುನ ಪಾಟೀಲ ಮಾಲಾರ್ಪಣೆ ಮಾಡಲಿದ್ದು, ಸಂಗೊಳ್ಳಿ ರಾಯಣ್ಣ ಅವರ ಭಾವಚಿತ್ರಕ್ಕೆ ಗಜೇಂದ್ರಗಡ ತಾಲೂಕು ಕುರುಬರ ಸಂಘದ ಗೌರವಾಧ್ಯಕ್ಷ ಎಚ್.ಎಸ್. ಸೋಂಪೂರ ಮಾಲಾರ್ಪಣೆ ನೆರವೇರಿಸುವರು.

ಸಮಾಜದ ಹಿರಿಯ ಮುಖಂಡ ವಿ.ಆರ್. ಗುಡಿಸಾಗರ ಅಧ್ಯಕ್ಷತೆ ವಹಿಸಲಿದ್ದಾರೆ. ಕುರುಬರ ಸಂಘದ ತಾಲೂಕಾಧ್ಯಕ್ಷ ಅಂದಪ್ಪ ಬಿಚ್ಚೂರ ಪ್ರಸ್ತಾವಿಕವಾಗಿ ಮಾತನಾಡಲಿದ್ದು, ರೋಣ ಹಾಗೂ ಗಜೇಂದ್ರಗಡ ತಾಲೂಕಿನ ಸಮಾಜದ ಎಲ್ಲ ಬಾಂಧವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ಉತ್ಸವವನ್ನು ಯಶಸ್ವಿಗೊಳಿಸೋಣ ಎಂದರು.

ಕುರುಬರ ಸಂಘದ ತಾಲೂಕಾಧ್ಯಕ್ಷ ಅಂದಪ್ಪ ಬಿಚ್ಚೂರ, ಗೌರವಾಧ್ಯಕ್ಷ ಎಚ್.ಎಸ್. ಸೋಂಪೂರ, ಕೆ.ಎಸ್. ಕೊಡತಗೇರಿ, ತಾ.ಪಂ ಮಾಜಿ ಸದಸ್ಯ ರಾಮಚಂದ್ರ ಹುದ್ದಾರ ಮುಂತಾದವರಿದ್ದರು.



ಗಜೇಂದ್ರಗಡ ಪಟ್ಟಣದ ಸಿಬಿಎಸ್‌ಸಿ ಶಾಲೆ ಎದುರಿನ 25 ಗುಂಟೆ ಜಾಗೆಯಲ್ಲಿ ಕನಕಭವನ ನಿರ್ಮಾಣಕ್ಕೆ ಜಾಗ ಮಂಜೂರಾತಿ ಹಂತದಲ್ಲಿದ್ದು, ಕನಕ ಭವನ ನಿರ್ಮಾಣದ ಅಡಿಗಲ್ಲು ಸಮಾರಂಭಕ್ಕೆ ಸಿಎಂ ಸಿದ್ದರಾಮಯ್ಯ ಆಗಮಿಸಲಿದ್ದಾರೆ ಎಂದು ವಿ.ಆರ್. ಗುಡಿಸಾಗರ ಮಾಹಿತಿ ನೀಡಿದರು.

## ವಿದ್ಯಾರ್ಥಿಗಳಿಗೆ ಮತಯಂತ್ರ ಕುರಿತು ಪ್ರಾತ್ಯಕ್ಷಿಕೆ



■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಇಲ್ಲಿಯ ಬಿ.ಎಚ್. ಪಾಟೀಲ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಮುಂಬರುವ ಸಾರ್ವತಿಕ ಲೋಕಸಭಾ ಚುನಾವಣೆಯ ನಿಮಿತ್ತ ವಿ.ವಿ. ಪ್ಯಾಟ್ ಮತದಾನದ ಕುರಿತು ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ಮೂಲಕ ಜಾಗೃತಿ ಮೂಡಿಸಲಾಯಿತು.

ಜಿಲ್ಲಾ ಚುನಾವಣಾಧಿಕಾರಿಗಳ ಸೂಚನೆಯ ಮೇರೆಗೆ ನರಗುಂದ ವಿಧಾನಸಭಾ ಕ್ಷೇತ್ರದ ಜಾಗೃತಿ ಕಾರ್ಯಕ್ರಮದಲ್ಲಿ ಮತಗಟ್ಟೆಗಳ ವಲಯಾಧಿಕಾರಿ ರಾಘವೇಂದ್ರ ಸಜ್ಜನ ಮತಯಂತ್ರ ಪ್ರಾತ್ಯಕ್ಷಿಕೆ ನೀಡಿ, ನೀವು ಯಾವ ಅಭ್ಯರ್ಥಿಗೆ ಮತ ಹಾಕುತ್ತೀರೋ ಅವರ ಕ್ರಮ ಸಂಖ್ಯೆ, ಹೆಸರು, ಚಿಹ್ನೆಯ ವಿವರಗಳನ್ನು ವಿ.ವಿ. ಪ್ಯಾಟ್ ಯಂತ್ರದಲ್ಲಿ ನೋಡಿ ಖಾತ್ರಿಪಡಿಸಿಕೊಳ್ಳಬಹುದು. ನಂತರ ಆ ರಶೀದಿ ಡ್ರಾಪ್ಟ್ ಬಾಕ್ಸ್‌ನಲ್ಲಿ ಬೀಳುತ್ತದೆ ಎಂದು ವಿವರಿಸಿದರು.

ಪ್ರಾಚಾರ್ಯ ಬಿ.ವಿ. ಪಾಟೀಲ ಮಾತನಾಡಿ, ಮತದಾನ ಈ ದೇಶದ ಪ್ರತಿಯೊಬ್ಬ ಅರ್ಹ ಪ್ರಜೆಯ ಕರ್ತವ್ಯ. ಹಾಕಿದ ಮತವು ವ್ಯರ್ಥವಾಗದಂತೆ ಪ್ರಥಮ ಬಾರಿಗೆ ಮತ ಚಲಾಯಿಸುವ ವಿದ್ಯಾರ್ಥಿಗಳು ಮತದಾನದ ವಿಧಾನಗಳನ್ನು ತಿಳಿದುಕೊಳ್ಳಬೇಕು ಎಂದರು.

ಗ್ರಾಮದ ಮಾರುತಿ ನಗರ, ಗೊಲ್ಲರ ಓಣಿ, ಗ್ರಾಮ ಚವಡಿ, ವಿರುಪಾಕ್ಷೇಶ್ವರ ದೇವಸ್ಥಾನದ ಆವರಣದಲ್ಲಿ ಮತದಾರರಿಗೆ ಪ್ರಾತ್ಯಕ್ಷಿಕೆಯ ಮೂಲಕ ಜಾಗೃತಿ ಮೂಡಿಸಲಾಯಿತು. ಗ್ರಾಮ ಲೆಕ್ಕಾಧಿಕಾರಿ ಬಿ.ಎಸ್. ದೇಸಾಯಿಗೌಡ್ರ, ಬಿಎಲ್‌ಓ ಗೌರಮ್ಮ ಲಕ್ಕುಂಡಿ, ಷಣ್ಮುಖಪ್ಪ ರಾಯಚೂರು, ಶಿವಾನಂದ ಬಿಳೆಕುದರಿ, ಮಹೇಶ ಪಾಟೀಲ, ಉಪಸ್ಥಿತರಿದ್ದರು. ಆರ್.ಎಸ್. ಚವಡಿ ಸ್ವಾಗತಿಸಿ ನಿರೂಪಿಸಿದರು.

## ಶತಮಾನದ ಕನಸು ಈಗ ನನಸಾಗುತ್ತಿದೆ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಅಯೋಧ್ಯೆಯಲ್ಲಿ ನಿರ್ಮಾಣ ವಾಗುತ್ತಿರುವ ಶ್ರೀ ರಾಮಂದಿರ ಭಾರತದ ದೈವ ಮಂದಿರವಾಗಲಿದೆ. ಶ್ರೀರಾಮನ ಜನ್ಮಸ್ಥಳದಲ್ಲಿ ರಾಮ ಮಂದಿರ ನಿರ್ಮಾಣವಾಗಬೇಕೆಂಬ ಹಿಂದೂಗಳ ಶತಮಾನದ ಕನಸು ಈಗ ನನಸಾಗುತ್ತಿದೆ. ಜ.22ರಂದು ಅಯೋಧ್ಯೆಯ ಭವ್ಯ ಮಂದಿರದಲ್ಲಿ ರಾಮನ ಪ್ರಾಣ ಪ್ರತಿಷ್ಠಾಪನೆ ನೆರವೇರುತ್ತಿರುವುದು ಪ್ರತಿಯೊಬ್ಬರಿಗೂ ಅಭಿಮಾನದ ಸಂಕೇತವಾಗಿದೆ ಎಂದು ಗಂಗಾವತಿಯ ಹೆಬ್ಬಾಳ ಬೃಹನ್ಮಠದ ನಾಗಭೂಷಣ ಸ್ವಾಮಿಗಳು ಅಭಿಪ್ರಾಯಪಟ್ಟರು.

ಅಯೋಧ್ಯೆಯಿಂದ ಬಂದಿರುವ ಅಕ್ಷತೆಯನ್ನು ಜಿಲ್ಲೆಯ ಪ್ರತೀ ಮನೆಗೆ ತಲುಪಿಸುವ ಯೋಜನೆಯನ್ನು ವಿಶ್ವ ಹಿಂದೂ ಪರಿಷತ್ ಹಮ್ಮಿಕೊಂಡಿರುವ ನಿಮಿತ್ತ ನಗರದ ಶ್ರೀ ರಾಘವೇಂದ್ರಸ್ವಾಮಿ ಕಲ್ಯಾಣ ಮಂಪಟದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾಗ್ಯನಗರದ ಶಂಕರಾಚಾರ್ಯ ಮಠದ ಶಿವಾನಂದ ಭಾರತೀ ಸ್ವಾಮಿಗಳು ಮಾತನಾಡಿ, ಶ್ರೀರಾಮ ಜಗತ್ತಿಗೆ ಆದರ್ಶ ಪುರಷನಾಗಿದ್ದ. ಅಕ್ಷತೆಯ ರೂಪದಲ್ಲಿ ನಮ್ಮ ಜಿಲ್ಲೆಯ ಪ್ರತಿಯೊಂದು ಮನೆಯಲ್ಲಿ ಅಯೋಧ್ಯೆಯ ಶ್ರೀರಾಮ ಪ್ರವೇಶ ಮಾಡಲಿ ಎಂದು ಅನುಗ್ರಹಿಸಿದರು.

ಅಭಿಯಾನದ ಜಿಲ್ಲಾ ಸಹ ಸಂಯೋಜಕ ವಸಂತ ಪೂಜಾರ, ಆರ್‌ಎಸ್‌ಎಸ್ ವಿಭಾಗ ಕಾರ್ಯವಾಹ ಕೇಶವ, ಹಿರಿಯ ಪ್ರಚಾರಕ ರಾಜಶೇಖರ ಮಾತನಾಡಿದರು.



ಈ ಸಂರ್ಭದಲ್ಲಿ ವಸಂತ ಪೂಜಾರ, ಅಪ್ಪಣ್ಣ ಪದಕಿ, ರಾಘವೇಂದ್ರ ದೇಸಾಯಿ, ಕೃಷ್ಣಾ ಸೋರಟೂರು, ನರಸಿಂಹ ಹುದ್ದಾರ, ರಾಘವೇಂದ್ರ ಪೊತೇದಾರರನ್ನು ಶ್ರೀಗಳು ಸನ್ಮಾನಿಸಿ ಆಶೀರ್ವದಿಸಿದರು.

ಆರ್‌ಎಸ್‌ಎಸ್ ವಿಭಾಗ ಸಂಘ ಚಾಲಕ ಬಸವರಾಜ ಡಂಬಳ, ವಿಹೆಚ್‌ಪಿ ಪ್ರಾಂತ ಸಂಯೋಜಕಿ ವಿಜಯಲಕ್ಷ್ಮೀ ಇದ್ದರು. ಗೋವಿಂದಾಚಾರ ವೇದಘೋಷ ನೆರವೇರಿಸಿದರು.

ಸುಪ್ರೀಯಾ ಹುನುಗುಂದ ಪ್ರಾರ್ಥಿಸಿದರು. ಸೇವಾ ಭಾರತಿ ಪ್ರಮುಖರಾದ ಮಹಾಲಕ್ಷ್ಮೀ ಕಂದಾರಿ ನಿರ್ವಹಿಸಿದರು. ಜಿಲ್ಲಾ ಸಂಯೋಜಕ ಅಯ್ಯನಗೌಡ ಹೇರೂರು ವಂದಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka